

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

Volume : 07 Issue : 126 Monday 20-01-2025 E-mail : maruti.b.hosamani76@gmail.com Page: 4 Price : Rs. 1/-


## ಕಂದಗಲ್ ಗ್ರಾಮ ಪಂಚಾಯತಿಯಲ್ಲಿ ಅಂಗವಿಕಲರ ವಿಶೇಷ ಗ್ರಾಮ ಸಭೆ

**ಸಿಹಿ ಕಹಿ ಸುದ್ದಿ, ಕಂದಗಲ್ಲ :** ಇಳಕಲ್ ತಾಲೂಕಿನ ಕಂದಗಲ್ ಗ್ರಾಮ ಪಂಚಾಯಿತಿಯಲ್ಲಿ ಅಂಗವಿಕಲರ ವಿಶೇಷ ಗ್ರಾಮ ಸಭೆ ಅಧ್ಯಕ್ಷತೆಯಲ್ಲಿ ಬಸವರಾಜ ಹಳ್ಳಳ್ಳಿ ಜ್ಯೋತಿ ಬೆಳಗಿಸುವ ಮೂಲಕ ಗ್ರಾಮ ಪಂಚಾಯಿತಿ ಗ್ರಂಥಾಲಯದಲ್ಲಿ ಶನಿವಾರ ನಡೆಯಿತು. ಹುನಗುಂದು ಮತ್ತು ಇಳಕಲ್ ತಾಲೂಕಿನ ಎಂ.ಆರ್.ಡಬ್ಲ್ಯೂ ಬೀರಗುಂಡ ಅವರು 21 ಬಗೆಯ ವಿಕಲತೆ ಹಾಗೂ ಯು.ಡಿ.ಐ.ಡಿ ಕಾರ್ಡ್, ಶಿಶು ಪಾಲನಾ ಭತ್ಯೆ ಹಾಗೂ ವಿವಾಹ ಪ್ರೋತ್ಸಾಹ ಧನ ಸಹಿತ ವಿವಿಧ ಸೌಲಭ್ಯಗಳ ಕುರಿತು ವಿವರಿಸಿದರು. ಮಾನಸಿಕ ಆರೋಗ್ಯ ಹಾಗೂ ಅಂಗವಿಕಲರಿಗೆ ಸಿಗುವ ಸೌಲಭ್ಯಗಳ ಕುರಿತು ಅವರು ಮಾಹಿತಿ ನೀಡಿದರು. ಮಾನಸಿಕ ಆರೋಗ್ಯ ಕುರಿತು ಮಾತನಾಡಿದರು. ಇಲಾಖೆಯಿಂದ ಸಿಗುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು. ಗ್ರಾಮ ಪಂಚಾಯತಿ ವಿಶೇಷ ಚೇತನರ ಪ್ರಯುಕ್ತ ಶನಿವಾರ ಗ್ರಾಮ ಪಂಚಾಯಿತಿಯಲ್ಲಿ ಅಂಗವಿಕಲರ ಸಮನ್ವಯ ಗ್ರಾಮ ಸಭೆ ನಡೆಯಿತು.

ಸಭೆಯಲ್ಲಿ ಅಂಗವಿಕಲರಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳು ಹಾಗೂ ಸಮಸ್ಯೆಗಳ ಕುರಿತು ಚರ್ಚಿಸಿ, ಅಂಗವಿಕಲರಿಗೆ ಇರುವ ಸೌಲಭ್ಯಗಳ ಬಗ್ಗೆ ತಿಳಿಸಲಾಯಿತು, ಹೀರ್ ಓತಗೇರಿ ವಿ.ಆರ್.ಡಬ್ಲ್ಯೂ ಸತ್ಯಪ್ಪ ವಾಲಿಕಾರ್ ಸೌಲಭ್ಯದ ಬಗ್ಗೆ ತಿಳಿಸಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷ ಬಸವರಾಜ ಹಳ್ಳಳ್ಳಿ ಅಂಗವಿಕಲರ ಸೇವೆ ಸಾಕ್ಷಾತ ಪರಮಾತ್ಮನ ಸೇವೆ ಮಾಡಿದಂಗ ಎಂದು



ತಿಳಿಸಿದರು.

ವಿಕಲ ಚೇತನರ ಜೊತೆ ನಾನು ಕೈಜೋಡಿಸಿ ನಮ್ಮ ಗ್ರಾಮ ಪಂಚಾಯತಿಯ ಫೈ ಪರ್ಶಂಟ್ ಅನುದಾನ ಅವರಿಗೆ ಮೀಸಲಿಟ್ಟ ಹಣವನ್ನು ಸಾಮಗ್ರಿಗಳನ್ನು ಖರೀದಿ ಮಾಡಿ ಅವರಿಗೆ ತಲುಪಿಸುತ್ತೇವೆ ಎಂದು ಮಾತನಾಡಿದರು, ಅಂಗವಿಕಲರನ್ನು ಸಮಾನ ದೃಷ್ಟಿಯಿಂದ ನೋಡಬೇಕು. ಕನಿಕರದಿಂದ ನೋಡುವ ಬದಲು ಗೌರವ ಮತ್ತು ಸಮಾನತೆ ಅವರ ಆತ್ಮ ವಿಶ್ವಾಸವನ್ನು ಹೆಚ್ಚಿಸುತ್ತದೆ. ಜನ ಪ್ರತಿನಿಧಿಗಳು ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಅಂಗವಿಕಲರಿಗೆ ಸುಲಭವಾಗಿ ಎಟುಕುವಂತೆ ಕೆಲಸ ಮಾಡಬೇಕು ಎಂದು ಹೇಳಿದರು. ಸರ್ಕಾರದಿಂದ ಅಂಗವಿಕಲರಿಗೆ ಸ್ವಾವಲಂಬಿ ಗಳಾಗಿ ಬದುಕಲು ಸಾಕಷ್ಟು ಯೋಜನೆಗಳಿವೆ. ಎಲ್ಲರೂ ಅಂತಹ ಸೌಲಭ್ಯಗಳ ಬಗ್ಗೆ ತಿಳಿದುಕೊಂಡು, ಅವುಗಳ ಪ್ರಯೋಜನ ಪಡೆದು ಆರ್ಥಿಕವಾಗಿ ಸದೃಢರಾಗಬೇಕು ಎಂದು ರೈಮಾನ್ ಸಾಬ್ ಭಗವಾನ್ ಹೇಳಿದರು. ಗ್ರಾಮ ಪಂಚಾಯತಿ ಸದಸ್ಯ ಗ್ರಾಮ ಪಂಚಾಯತಿ ಕಾರ್ಯದರ್ಶಿ ಸುಪುತ್ರಪ್ಪ ಕತ್ತಿ, ಸದಸ್ಯರಾದ ತಿಮ್ಮರೆಡ್ಡಿ ಗೌಂಡಿ ನಂದವಾಡಗಿ, ಎಂ.ಆರ್. ಡಬ್ಲ್ಯೂ ಹಿರೇ ಕೊಡಗಲಿ ಪರಸಪ್ಪ ನಾಯಕ್ ವಿ.ಆರ್.ಡಬ್ಲ್ಯೂ ಕಂದಗಲ್ ಗ್ರಾಮ ಪಂಚಾಯತಿ ರಿಯಾ ವಿ.ಆರ್. ಡಬ್ಲ್ಯೂ ಗಿರಿಯಪ್ಪ ಜವಾನರ್ ಭಾಗ್ಯ ಬೆನಕಟ್ಟಿ ಎಲ್ಲಾ ವಿಶೇಷ ಚೇತನರು ಮತ್ತು ಹಿರಿಯ ನಾಗರಿಕರು ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗದವರು ಗ್ರಂಥಾಲಯ ಸಿಬ್ಬಂದಿಯವರು ಊರಿನ ಹಿರಿಯರು ಮತ್ತು ಪತ್ರಕರ್ತರು, ಮತ್ತಿತರರು ಇದ್ದರು ರಮೇಶ ದಾಸರ ಸ್ವಾಗತಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರತಾಪ್.ವಾಯ್.ಕಿಳ್ಳಿ.ಇಲಕಲ್ಲ**

## ವಿಜಯೇಂದ್ರ ಅಧಿಕಾರದ ಕತ್ತಿ ಹಿಡಿದು ಸರ್ಕಾರವನ್ನ ತರಬೇಕಿದೆ

**ಸಿಹಿ ಕಹಿ ಸುದ್ದಿ,**

**ಮಾನ್ವಿ :** ವಿಜಯೇಂದ್ರ ಅವರು ಬಿಜೆಪಿ ಪಕ್ಷದ ರಾಜ್ಯಾಧ್ಯಕ್ಷ ರಾಗಿದ್ದಾರೆ. ವಿಜಯೇಂದ್ರ ಅವರು ಮುಖ್ಯಮಂತ್ರಿಯಾಗುವ ಮೂಲಕ ನಮಗೆ ನವಲಿ ಜಲಾಶಯ ಮಾಡಿ, ಹತ್ತಾರು ಕೆರೆಯನ್ನ ಮಾಡಬೇಕು ಎಂದು ಮಾಜಿ ಸಚಿವ ಕೆ.ಶಿವನಗೌಡ ನಾಯಕ ತಿಳಿಸಿದರು.

ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದಲ್ಲಿ ಕೆ.ಶಿವನಗೌಡ ನಾಯಕ ಅಭಿಮಾನಿಗಳ ಬಳಗದಿಂದ ನಡೆದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮಾತನಾಡಿ, ವಿಜಯೇಂದ್ರ ಈ ರಾಜ್ಯದ ಮುಖ್ಯಮಂತ್ರಿ ಆಗುವುದನ್ನ ತಪ್ಪಿಸಲು ಯಾ-ರಿಂದ ಸಾಧ್ಯವಿಲ್ಲ ಮುಂದೊಂದು ದಿನ ವಿಜಯೇಂದ್ರ ಮುಖ್ಯಮಂತ್ರಿ ಹಾಗುತ್ತಾರೆ ಎಂದು ಕೊಂಡಾಡಿದರು. ರಾಯಚೂರು



ಜಿಲ್ಲೆಯಲ್ಲಿ ಏಮ್ಸ್ ಹೋರಾಟ ನಿರಂತರವಾಗಿ ಮಾಡುತ್ತಿದ್ದಾರೆ, ವಿಜಯೇಂದ್ರ ಅವರು ಮೋದಿ, ನಡ್ಡಾ, ಅಮಿತ್ ಶಾ ಮನವೊಲಿಸಿ ಏಮ್ಸ್ ತರಬಹುದು ಅದು ವಿಜಯೇಂದ್ರ ಅವರಿಂದ ಮಾತ್ರ ಸಾಧ್ಯವಿದೆ ಎಂದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಕಂದಗಲ್ಲು ಗ್ರಾಮದ ಉಡಚಲಮ್ಮ ದೇವಿ ದೇವಸ್ಥಾನಕ್ಕೆ 1.50 ಲಕ್ಷ ಧರ್ಮಸ್ಥಳ ಸಂಘದಿಂದ ಮಂಜೂರು

**ಸಿಹಿ ಕಹಿ ಸುದ್ದಿ,**

**ಕೊಟ್ಟೂರು :** ಕೊಟ್ಟೂರು ಯೋಜನಾ ವ್ಯಾಪ್ತಿಯ ಸಿರಿಮಠ ವಲಯದ ಕಂದಗಲ್ಲು ಕಾರ್ಯ ಕ್ಷೇತ್ರದಲ್ಲಿ ಉಡಚಲಮ್ಮಾದೇವಿ ದೇವಸ್ಥಾನಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ದೇವಸ್ಥಾನದ ಜಿರ್ಣೋದ್ಧಾರಕ್ಕಾಗಿ 150000/- ಮಂಜೂರಾಗಿದ್ದು ಈ ಡಿ.ಡಿ ಯನ್ನು ವಿಜಯ ನಗರ ಜಿಲ್ಲಾ ನಿರ್ದೇಶಕರಾದ ಸತೀಶ್ ಶೆಟ್ಟಿ ಅವರು ಕಮಿಟಿಯವರಿಗೆ ವಿತರಣೆ ಮಾಡಿದರು. ಈ ಸಂದರ್ಭದಲ್ಲಿ ಕಮಿಟಿಯ ಅಧ್ಯಕ್ಷರು ಹಾಗೂ ಊರಿನ ಮುಖಂಡರಾದ ನೀಲಕಂಠಪ್ಪ ಕಾರ್ಯದರ್ಶಿ ಸಿದ್ದಪ್ಪ ಗ್ರಾ.ಪಂ ಮಾಜಿ ಅಧ್ಯಕ್ಷರಾದ ಶಿವಕುಮಾರ ಗೌಡ್ರು ಹಾಗೂ ಗ್ರಾ.ಪಂ ಸದಸ್ಯರಾದ ಹೆಚ್ ಪರಸಪ್ಪ, ಕುಬೇರಪ್ಪ, ಕೊಟ್ಟೂರು ತಾಲೂಕಿನ ಕ್ಷೇತ್ರ ಯೋಜನಾಧಿಕಾರಿಗಳಾದ ನವೀನ ಕುಮಾರ ಹೆಚ್.ಡಿ ಒಕ್ಕೂಟದ ಅಧ್ಯಕ್ಷರಾದ ಗಂಗಾ ನಾಯ್ಕ ಉಪಾಧ್ಯಕ್ಷರಾದ ಶ್ರೀದೇವಿ ವಲಯದ ಮೇಲ್ವಿಚಾರಕರಾದ ಸಾವಿತ್ರಿ ನಾಗರಾಜ ಜ್ಞಾನ ವಿಕಾಸ ಸಮನ್ವಯಾಧಿಕಾರಿ ಸೌಮ್ಯ ಣಟಿಂ



ಶಿವರಾಜ ಛಿಛಿ ಸೇವಾದಾರರಾದ ಸವಿತಾ ಸೇವಾ ಪ್ರತಿನಿಧಿ ಗಂಗಮ್ಮ ಹಾಗೂ ಕಮಿಟಿಯ ಸರ್ವ ಸದಸ್ಯರು ಊರಿನ ಮುಖಂಡರು ಮತ್ತು ಸಂಘದ ಸದಸ್ಯರು ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಯಶಸ್ವಿ ಗೊಳಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್:ಪ್ರದೀಪ್ ಕುಮಾರ್.ಸಿ.ಕೊಟ್ಟೂರು**

## ಕಾಯಕ ನಿಷ್ಠೆಯಲ್ಲಿ ದೇವರಿದ್ದಾನೆ: ಶ್ರೀ ಮಹಾಂತಯ್ಯ ಸ್ವಾಮಿಜಿ

**ರಬಕವಿ-ಬನಹಟ್ಟಿ :** ಭಗವಂತನು ನಮಗೆ ಒಲಿಯಬೇಕಾದರೆ ಕಾಯಕ ನಿಷ್ಠೆಯೊಂದಿಗೆ ಶ್ರದ್ಧೆ ಹಾಗು ಪ್ರಾಮಾಣಿಕ ಭಾವನೆ ಇರಬೇಕು. ಅಂದಾಗ ಮಾತ್ರ ದೇವರು ಒಲಿಯುತ್ತಾನೆ ಎಂದು ಶ್ರೀ ಮಹಾಂತಯ್ಯ ಸ್ವಾಮಿಗಳು ಹೇಳಿದರು.

ಸಮೀಪದ ಮಹಿಷವಾಡಗಿ ಗ್ರಾಮದಲ್ಲಿ ಮಕರ ಸಂಕ್ರಮಣ ನಿಮಿತ್ಯ ಶ್ರೀ ಬಸವಣ್ಣ ದೇವರ ಪಲ್ಲಕ್ಕಿ ಉತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಕೇವಲ ಸೋಹಂ ಬದಲಾಗಿ ದಾಸೋಹದಲ್ಲಿ ವಿಶಾಲ ಮನೋಭಾ



ವವಿರಬೇಕು. ಅಲ್ಲದೆ ಪರೋಪಕಾರಿ ಮೌಲ್ಯಗಳನ್ನು ಅಳವಡಿಸಿಕೊಂಡು ಕೆಲಸ ಕಾರ್ಯಗಳಿಂದ ಮಾನವೀಯ ಜೀವನ ನಡೆಸಬೇಕೆಂದು ಸ್ವಾಮೀಜಿ ಹೇಳಿದರು.ಇದಕ್ಕೂ ಪೂರ್ವದಲ್ಲಿ ಕೃಷ್ಣಾ ನದಿಯ ತಟದಲ್ಲಿ ದೇವರ ಪೂಜಾ ಸೇವೆಯೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಪಲ್ಲಕ್ಕಿ ಉತ್ಸವ ನಡೆಯಿತು. ಸೂರಪ್ಪ ತುಂಗಳ, ಮಹಾದೇವ ಅಂಬಿ, ವಿವೇಕ ಯಲಗುದ್ರಿ, ನೇಮಿನಾಥ ನಂದಗಾಂವ, ಶ್ರೇಣಿಕ ಮುಗ್ಗನ್ನವರ, ಮಹಾವೀರ ಶಿರಹಟ್ಟಿ, ಆನಂದ ಮಠದ, ಅಣ್ಣಪ್ಪ ತುಂಗಳ, ದಾನಪ್ಪ ತುಂಗಳ, ಗುರುರಾಜ ಬದಾಮಿ, ರಾಜು ಶಿರಹಟ್ಟಿ ಸೇರಿದಂತೆ ನೂರಾರು ಭಕ್ತರು ಈ ಸಂದರ್ಭದಲ್ಲಿ ಪಾಲ್ಗೊಂಡಿದ್ದರು.

## ಸಿದ್ಧರಾಮೇಶ್ವರರು ಯೋಗಿಗಳ ಯೋಗಿಯಾಗಿದ್ದರು: ಸಿದ್ದು ಸವದಿ




**ರಬಕವಿ-ಬನಹಟ್ಟಿ :** ಹನ್ನೆರಡನೆಯ ಶತಮಾನದ ಮಹಾನ ವಚನಕಾರ ಸಿದ್ಧರಾಮೇಶ್ವರರು ಯೋಗಿಗಳ ಯೋಗಿಯಾಗಿದ್ದರು. ಅಲ್ಲಮ, ಬಸವ ಹಾಗೂ ಚೆನ್ನಬಸವಣ್ಣನವರ ಸಾಲಿನಲ್ಲಿ ನಿಲ್ಲುವ ಶ್ರೇಷ್ಠ ಅನುಭಾವಿಯಾಗಿದ್ದರು. ಅವರ ವಚನಗಳನ್ನು ಓದುವುದರ ಜೊತೆಗೆ ಅವುಗಳನ್ನು ಇಂದಿನ ಯುವ ಜನಾಂಗಕ್ಕೆ ಪರಿಚಯಿಸುವ ಮಹತ್ತರವಾದ ಜವಾಬ್ದಾರಿ ಸಮಾಜ ಬಾಂಧವರ ಮೇಲಿದೆ ಎಂದು ಶಾಸಕ ಸಿದ್ದು ಸವದಿ ಹೇಳಿದರು.

ಅವರು ಬುಧವಾರ ರಬಕವಿ-ಬನಹಟ್ಟಿಯ ತಹಶೀಲ್ದಾರ್ ಕಾರ್ಯಾಲಯದಲ್ಲಿ ಹಮ್ಮಿಕೊಂಡ ಸಿದ್ಧರಾಮೇಶ್ವರರ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಮಾಜ ಬಾಂಧವರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ನೀಡಬೇಕು. ಶೈಕ್ಷಣಿಕ ಅಭಿವೃದ್ಧಿಯಿಂದ ಮಾತ್ರ ಸಮಾಜವು ಮುಂದೆ ಬರಲು ಸಾಧ್ಯವಾಗುತ್ತದೆ. ಹನ್ನೆರಡನೆಯ ಶತಮಾನದ ವಚನಕಾರರ ವಚನಗಳು ಅಂದಿಗಿಂತಲೂ ಇಂದಿನ ದಿನಗಳಲ್ಲಿ ಹೆಚ್ಚು ಪ್ರಸ್ತುತವಾಗಿವೆ. ಆದ್ದರಿಂದ ವಚನಗಳನ್ನು ಓದುವುದರ ಮೂಲಕ ವಚನಕಾರರ ತತ್ವ ಸಿದ್ಧಾಂತಗಳು ಅರಿವಾಗುತ್ತವೆ. ಇವುಗಳನ್ನು ನಮ್ಮ ಜೀವನದಲ್ಲಿ ರೂಢಿಸಿಕೊಳ್ಳಬೇಕು ಎಂದು ಶಾಸಕ ಸವದಿ ತಿಳಿಸಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಗಿರೀಶ ಸ್ವಾದಿ, ಚನ್ನಬಸಯ್ಯ ಮಠಪತಿ, ಸಮಾಜದ ಮುಖಂಡರಾದ ರಾಮಣ್ಣ ಪಾತ್ರೋಟ, ಈಶ್ವರ ಪೂಜಾರಿ, ಸುಭಾಸ ಮಣ್ಣವಡ್ಡರ, ಶಂಕರ ಪೂಜಾರಿ, ಪ್ರಕಾಶ ಬೆಲ್ಲಮ್, ಪರಶುರಾಮ ತೇರದಾಳ, ಪರಶುರಾಮ ಪಾತ್ರೋಟ, ಮಾರುತಿ ಗಾಡಿವಡ್ಡರ, ಬಾಬು ಗಾಡಿವಡ್ಡರ, ಸದಾಶಿವ ಗಾಡಿವಡ್ಡರ, ಅಶೋಕ ಮಣ್ಣವಡ್ಡರ, ಕುಮಾರ ಪಾತ್ರೋಟ, ಸಂಜು ಬೆಲ್ಲಮ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

## ಗುಲಾಬಿ ದಿನಾಚರಣೆ: ತಂಬಾಕು ನಿಯಂತ್ರಣದ ಕುರಿತು ಜನರಲ್ಲಿ ಜಾಗೃತಿ ಅಗತ್ಯ

**ಮಹಾಲಿಂಗಪುರ :** ತಂಬಾಕು ನಿಯಂತ್ರಣದ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದು ಬಹಳ ಅಗತ್ಯವಿದೆ ಎಂದು ಸ್ಥಳೀಯ ಪೊಲೀಸ್ ಠಾಣೆಯ ಅಪರಾಧ ವಿಭಾಗದ ಪಿಎಸ್ಐ ಮಧು ಎಲ್. ಹೇಳಿದರು.

ಸ್ವಾಮಿ ವಿವೇಕಾನಂದರ ಜಯಂತಿ ಅಂಗವಾಗಿ ಜಿಲ್ಲಾಧಿಕಾರಿಗಳು ಹಾಗೂ ಶಿಕ್ಷಣ ಇಲಾಖೆಯ ಆದೇಶದಂತೆ ಸೋಮವಾರ ಪಟ್ಟಣದ ಸರ್ಕಾರಿ ಪ್ರೌಢ ಶಾಲೆಯ ವತಿಯಿಂದ ಹಮ್ಮಿಕೊಂಡ ತಂಬಾಕು ಮುಕ್ತ ನಗರ ಸಂಕಲ್ಪ ಜಾಗೃತಿ ಜಾಥಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ಪಟ್ಟಣದ ಪ್ರತಿಯೊಂದು ಶಾಲಾ-ಕಾಲೇಜುಗಳ ಅವರಣದಲ್ಲಿ ತಂಬಾಕು ಮುಕ್ತ ಮಾಡಲು ಸಂಕಲ್ಪ ಮಾಡಬೇಕು. ಅದಕ್ಕೆ ಸಾರ್ವಜನಿಕರು ಸಹಕಾರ ನೀಡಬೇಕು. ತಂಬಾಕು ಮತ್ತು ಗುಟಕಾ ಬಳಕೆಯಿಂದ ಕ್ಯಾನ್ಸರ್ ಕಾರಕ ಕಾಯಿಲೆಗಳು ಹೆಚ್ಚುತ್ತಿವೆ. ಕುಟುಂಬಗಳ ಮುಖ್ಯಸ್ಥರು ಅಕಾಲಿಕವಾಗಿ




ಜೀವ ಕಳೆದುಕೊಂಡು ಅವಲಂಬಿತರ ಬದುಕು ಅತಂತ್ರವಾಗುತ್ತಿವೆ ಎಂದು ವಿಷಾದಿಸಿದರು.

ಮುಖ್ಯ ಶಿಕ್ಷಕ ಧನಂಜಯ ಕುಲಕರ್ಣಿ ಮಾತನಾಡಿ, ಕ್ಯಾನ್ಸರ್, ಹೃದಯದ ಸಂಬಂಧಿಸಿದ ಕಾಯಿಲೆಗಳಿಗೆ, ಶ್ವಾಸಕೋಶದ ಕಾಯಿಲೆಗಳಿಗೆ ತಂಬಾಕು ಸೇವನೆ ಪ್ರಮುಖ ಕಾರಣ. ಬೀಡಿ, ಸಿಗರೇಟು ಧೂಮಸಹಿತ ತಂಬಾಕು ಉತ್ಪನ್ನಗಳಲ್ಲಿ ಏಳು ಸಾವಿರಕ್ಕೂ ಹೆಚ್ಚು ರಾಸಾಯನಿಕಗಳಿವೆ. ಅದರಲ್ಲಿನ 69%ರಷ್ಟು ಕ್ಯಾನ್ಸರ್ ಕಾರಕ ವಸ್ತುಗಳಾಗಿವೆ. ಆದ ಕಾರಣ ತಂಬಾಕು ಬಳಕೆ ಮಾಡಬಾರದು ಎಂದರು.

ಗುಲಾಬಿ ದಿನಾಚರಣೆ :

ಸ್ವಾಮಿ ವಿವೇಕಾನಂದ ಜಯಂತಿಯ ಪ್ರಯುಕ್ತ ಯುವ ದಿನವನ್ನು ಗುಲಾಬಿ ದಿನಾಚರಣೆಯನ್ನಾಗಿ ಆಚರಿಸಲಾಯಿತು. ಶಾಲೆಯ ನೂರು ಗಜ ಅಂತರದಲ್ಲಿರುವ ಅಂಗಡಿಗಳಿಗೆ ಗುಲಾಬಿ ಹೂ ನೀಡಿ ತಂಬಾಕು ಉತ್ಪನ್ನಗಳ ಮಾರಾಟ ಮಾಡದಂತೆ ಮಕ್ಕಳೊಂದಿಗೆ ಜಾಗೃತಿ ಮೂಡಿಸಲಾಯಿತು. ಜಾಗೃತಿ ಜಾಥಾವನ್ನು ನಗರದ ಚೆನ್ನಮ್ಮ ವೃತ್ತದ ಮೂಲಕ ಬಸ್ ನಿಲ್ದಾಣದಲ್ಲಿರುವ ಎಲ್ಲಾ ಅಂಗಡಿಗಳಿಗೆ ತಂಬಾಕು ಉತ್ಪನ್ನಗಳ ಮಾರಾಟ ಮಾಡದಂತೆ ಗುಲಾಬಿ ಹೂ ನೀಡಿ ವಿನಂತಿಸಿಕೊಳ್ಳಲಾಯಿತು.

ಶಾಲೆಯ ಎಸ್ಡಿಎಂಸಿ ಅಧ್ಯಕ್ಷ ಸಂಜಯ ರಾಥೋಡ, ಶಿಕ್ಷಕರಾದ ಆರ್. ಸಿ. ಜಾಲಿಗಿಡದ, ಎನ್. ಬಿ. ಬೆಟಗೇರಿ, ಆರ್. ಎಸ್. ಬೀಳಗಿ, ಜಿ. ಎಂ. ಅಂಗಡಿ, ಪಿ. ಎ. ಖಾನವಿಲಕರ, ಸದಾಶಿವ ಕಂಬಾರ,ಪಿ. ಸಿ. ಫಕಿರಣ್ಣವರ, ಎಂ. ಜಿ. ಅಲ್ಲಾಖಾನ, ಎಂ. ಎಸ್. ಮಲಾಬಾದಿ, ವ್ಹಿ. ಸಿ. ಗುಡ್ಲಮನಿ, ಆರ್. ಎಂ. ಕಂಬಾರ, ಆರ್. ವಾಯ್. ಕರಿಗಾರ, ಎಸ್. ಎ. ಬಡಿಗೇರ, ಆರ್. ಎಸ್. ಲಮಾಣಿ, ಜೆ. ಎಂ. ಕಾಪಸೆ, ಪೊಲೀಸ್ ಸಿಬ್ಬಂದಿ ಬಸವರಾಜ ದೇಸಾಯಿ, ಮಲ್ಲೇಶ ಪವಾರ ಸೇರಿದಂತೆ ಶಾಲಾ ಮಕ್ಕಳು ತಂಬಾಕು ಮುಕ್ತ ನಗರ ಸಂಕಲ್ಪ ಜಾಗೃತಿ ಜಾಥಾದಲ್ಲಿ ಭಾಗವಹಿಸಿದ್ದರು.

## ಮರಾಠಾ ಕಿಲ್ಲಾದಲ್ಲಿ ಜೀಜಾಮಾತಾ ಜಯಂತಿ



**ಮಹಾಲಿಂಗಪುರ :** ಇಲ್ಲಿಯ ವಡಗೇರಿ ಪ್ಲಾಟ್ನ ಛತ್ರಪತಿ ಶಿವಾಜಿ ಮಹಾರಾಜರ ಮರಾಠಾ ಕಿಲ್ಲಾದಲ್ಲಿ ರಾಜಮಾತಾ ಜೀಜಾಮಾತಾ ಜಯಂತಿಯನ್ನು ಆಚರಿಸಲಾಯಿತು.

ಮರಾಠಾ ಸಮಾಜದ ಅಧ್ಯಕ್ಷ ಮಹೇಶ ಜಾಧವ ಜೀಜಾಮಾತಾ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಅವರು, ನಮ್ಮ ಕುಲಪುರುಷ, ಹಿಂದೂ ಧರ್ಮ ರಕ್ಷಕ ಛತ್ರಪತಿ ಶಿವಾಜಿಯಂತಹ ಆದರ್ಶ ಮಗನಿಗೆ ಜನ್ಮ ನೀಡಿದ ರಾಜಮಾತಾ ಜೀಜಾಮಾತಾರವರ ಆದರ್ಶ ಗುಣಗಳನ್ನು ಇಂದಿನ ತಾಯಂದಿರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಬೇಕು ಎಂದರು.

ಹಿರಿಯರಾದ ರಾಮಚಂದ್ರ ಪವಾರ, ಅರ್ಜುನ ಮೋಪಗಾರ, ಮಹಾದೇವ ಸಾವಂತ, ಚಂದ್ರಶೇಖರ ಮೋರೆ, ಸುರೇಶ ಶಿಂಧೆ, ಆನಂದ ಪವಾರ, ನಾಗಪ್ಪ ಪವಾರ, ಮುಕುಂದ ಮೆಂಗಾಣಿ, ರಾಧವ್ವ ಪವಾರ, ಪ್ರಿಯಾಂಕಾ ಪವಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು.



## ಸಂಕ್ರಾಂತಿ ನಿಮಿತ್ಯ ಪ್ರಭುದೇವರ ಪಲ್ಲಕ್ಕಿ ಉತ್ಸವ

**ತೇರದಾಳ :** ವರ್ಷದ ಮೊದಲ ಹಬ್ಬ ಮಕರ ಸಂಕ್ರಾಂತಿ ನಿಮಿತ್ಯ ಪಟ್ಟಣದ ಕ್ಷೇತ್ರಾಧಿಪತಿ ಅಲ್ಲಮ ಪ್ರಭುದೇವರ ಪಲ್ಲಕ್ಕಿ ಹಾಗೂ ನಂದಿಕೋಲು ಉತ್ಸವ ಮಂಗಳವಾರ ಸಂಭ್ರಮ ಸಡಗರದಿಂದ ಜರುಗಿತು.

ಕಾರ್ಯಕ್ರಮ ನಿಮಿತ್ಯ ಬೆಳಿಗ್ಗೆ ಪ್ರಭುದೇವರ ದೇವಸ್ಥಾನದಲ್ಲಿ ಪ್ರಭುದೇವರ ಗದ್ದುಗೆಗೆ ರುದ್ರಾಭಿಷೇಕ, ಅಲಂಕಾರಿತ ಪೂಜೆ ಸೇರಿದಂತೆ ಹಲವು ಧಾರ್ಮಿಕ ವಿಧಿವಿಧಾನಗಳು ಅರ್ಚಕ ಪರಯ್ಯ ಮೇಲಿನಮನಿ ಅವರಿಂದ ಜರುಗಿದವು. ಬಳಿಕ ಸಂಪ್ರದಾಯದಂತೆ ನಾಡಗೌಡರ ಮನೆಯಿಂದ ನಂದಿಕೋಲು ದೇವಸ್ಥಾನಕ್ಕೆ ಆಗಮಿಸಿದ ಬಳಿಕ ಪೂಜೆ ಸಲ್ಲಿಸಿ ಪ್ರಭುದೇವರ ಪಲ್ಲಕ್ಕಿ ಹಾಗೂ ನಂದಿಕೋಲು ಉತ್ಸವಕ್ಕೆ ಚಾಲನೆ ನೀಡಲಾಯಿತು.

ಸಿದ್ದೇಶ್ವರ ಗಲ್ಲಿ, ಜವಳಿ ಬಜಾರ, ಕನ್ನಡ ಶಾಲೆ, ಗಣಪತಿ ದೇವಸ್ಥಾನ, ದ್ವಾರಬಾಗಿಲು, ಎಸ್ಬಿಐ ಬ್ಯಾಂಕ್ ರಸ್ತೆ ಮುಖಾಂತರ ದೇಸಾರ ಬಾವಿಗೆ ಉತ್ಸವ ತಲುಪಿತು. ನಂತರ ದೇಸಾರ ಬಾವಿಯಲ್ಲಿ ಸುಮಾರು ಎರಡು ಗಂಟೆಯಷ್ಟು ಕಾಲ ಸಾಮೂಹಿಕ ಅಭಿಷೇಕ ಕಾರ್ಯಕ್ರಮ ನಡೆಯಿತು. ದೇಸಾರ ಬಾವಿಯಲ್ಲಿ ಅಭಿಷೇಕ ಮುಗಿಯುವವರೆಗೆ ಭಕ್ತರು ಉಪವಾಸ ಇರುವುದು ವಾಡಿಕೆ. ಪ್ರಭುಲಿಂಗ ಝೂಂಜ್, ಕರಡಿ ಮೇಳ ಉತ್ಸವಕ್ಕೆ ಮೆರಗು ನೀಡಿದವು. ಉತ್ಸವದ ದಾರಿಯುದ್ದಕ್ಕೂ ಬಣ್ಣ ಬಣ್ಣದ ರಂಗೋಲಿಗಳು ಸ್ವಾಗತ ಕೋರಿದವು. ನಿಗದಿತ ಸ್ಥಳಗಳಲ್ಲಿ ಭಕ್ತರು ವಚನ ಗೀತೆಗಳನ್ನು ಹಾಡಿ ಭಕ್ತಿಯ ಪರಾಕಾಷ್ಠೆಗೆ ಸಾಕ್ಷಿಯಾದರು. ನಾಡಗೌಡ ಕುಟುಂಬ ಸೇರಿದಂತೆ ಅರ್ಚಕರ ಸೇವಾ ಸಮಿತಿ, ಜನಪ್ರತಿನಿಧಿಗಳು, ಸೇವಕರು ಪಾಲ್ಗೊಂಡಿದ್ದರು.

# ರಸ್ತೆ ಸುರಕ್ಷತೆ ಅರಿವು ಮೂಡಿಸುವ ಜನಜಾಗೃತಿ ಕಾರ್ಯಕ್ರಮ



**ಕೊಪ್ಪಳ:** ವಾಹನಗಳು ಮನೋರಂಜನೆಯ ಸಾಧನಗಳಲ್ಲ,ಪ್ರತಿಯೊಬ್ಬ ವಾಹನ ಚಾಲಕ ಮತ್ತು ಸವಾರರಲ್ಲಿ ರಸ್ತೆ ಸುರಕ್ಷತೆ ಅರಿವು ಮೂಡಿಸುವ ಜನಜಾಗೃತಿ ಕಾರ್ಯವನ್ನು ಪ್ರಾದೇಶಿಕ ಸಾರಿಗೆ ಕಚೇರಿ ಹಮ್ಮಿಕೊಂಡಿದೆ. ಜನವರಿ ತಿಂಗಳಲ್ಲಿ ಆಚರಿಸಲ್ಪಡುವ ರಸ್ತೆ ಸುರಕ್ಷತಾ ಮಾಸಿಕದ ಅಂಗವಾಗಿ ಇಲ್ಲಿನ ಹೊಸಪೇಟೆ ರಸ್ತೆಯ ಆರ್.ಟಿ.ಓ.ಚಾಲನಾ ಪರೀಕ್ಷೆ ಆವರಣದಲ್ಲಿ ಇಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ಲಕ್ಷ್ಮೀಕಾಂತ ನಾಲವಾರ ನೇತೃತ್ವದಲ್ಲಿ ರಸ್ತೆ ಸುರಕ್ಷತೆ ಜಾಗೃತಿ ಕಾರ್ಯಕ್ರಮ ಜರುಗಿತು.

ಹಿರಿಯ ಮೋಟಾರು ವಾಹನ ನಿರೀಕ್ಷಕ ಪ್ರಭಾಕರ ಎನ್ ಮಾತನಾಡಿ, ಎಲ್ಲ ವಾಹನ ಚಾಲಕರು ರಸ್ತೆ ಸುರಕ್ಷತೆಗೆ ಮೊದಲ ಆದ್ಯತೆ ನೀಡಬೇಕು.ವೇಗದ ಮಿತಿ ಹಾಗೂ ಚಾಲನೆಯ ಇತಿಮಿತಿಗಳನ್ನು ಅರ್ಥ ಮಾಡಿಕೊಳ್ಳಬೇಕು.ಕಾರು ಚಲಾಯಿಸುವಾಗ ಕಡ್ಡಾಯವಾಗಿ ಸೀಟ್ ಬೆಲ್ಟ್ ಧರಿಸಿ,ನಿಧಾನಿಸಿದರೆ ಅನೇಕ ಅಪಘಾತಗಳನ್ನುತಪ್ಪಿಸಲುಸಾಧ್ಯಎಂದರು.

ಹಿರಿಯ ಮೋಟಾರು ವಾಹನ ನಿರೀಕ್ಷಕ ಮಂಜುನಾಥ ಪ್ರಸಾದ ಮಾತನಾಡಿ, ನಾವು ತೆರಳಬೇಕಾದ ಸ್ಥಳಕ್ಕೆ ನಿಗದಿತ ಅವಧಿಯೊಳಗೆ ತಲುಪಲು ವೇಗವಾಗಿ ವಾಹನ ಚಾಲನೆ ಮಾಡಬಾರದು, ನಿಧಾನವಾಗಿ ಜಾಗರೂಕತೆಯಿಂದ ಚಾಲನೆ ಮಾಡಬೇಕು.ನಿರ್ದಿಷ್ಟ ಸಮಯಕ್ಕೆ ತಲುಪಲು ಸ್ವಲ್ಪಮುಂಚಿತವಾಗಿಹೊರಡುವ ಮನೋಭಾವ ರೂಢಿಸಿಕೊಳ್ಳಬೇಕು. ರಸ್ತೆ ಸುರಕ್ಷತೆ ಬಗ್ಗೆ ಯುವಜನರಲ್ಲಿ ಹೆಚ್ಚು ಜಾಗೃತಿ ಮೂಡಿಸುವುದು ಅಗತ್ಯವಾಗಿರುವ ಹಿನ್ನೆಲೆಯಲ್ಲಿ ಕಾಲೇಜುಗಳಿಗೆ ತೆರಳಿ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲಾಗುವುದು ಎಂದರು.

ಬೆಂಗಳೂರಿನ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಜಂಟಿ ನಿರ್ದೇಶಕ ಮಂಜುನಾಥ ಡಿ.ಡೊಳ್ಳಿನ ಮಾತನಾಡಿ, ರಸ್ತೆ ಸುರಕ್ಷತೆ ಜಾಗೃತಿಗಾಗಿ ಪ್ರಾದೇಶಿಕ ಸಾರಿಗೆ ಇಲಾಖೆ ಸೇರಿದಂತೆ ಸರ್ಕಾರದ ವಿವಿಧ ಇಲಾಖೆಗಳು ನಿರಂತರವಾಗಿ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿವೆ.ನೀವು ರಸ್ತೆಯ ಹಿರೋಗಳಾಗಿ ಎಂಬ ಘೋಷವಾಕ್ಯದಡಿ ಈ ಬಾರಿ ರಸ್ತೆ ಸುರಕ್ಷತೆ ಮಾಸಾಚರಣೆ ಮಾಡಲಾಗುತ್ತಿದೆ.ಪ್ರತಿಯೊಬ್ಬರು ಸಾರಿಗೆ,ಸಂಚಾರ ನಿಯಮಗಳನ್ನು ಅರಿತುಕೊಂಡು ,ಅಳವಡಿಸಿಕೊಂಡು,ಕಟ್ಟುನಿಟ್ಟಾಗಿ ಪಾಲಿಸಿದರೆ ರಸ್ತೆ ಸುರಕ್ಷತೆಯನ್ನು ಪರಿಣಾಮಕಾರಿಗೊಳಿಸಲುಸಾಧ್ಯಎಂದರು.

ಪ್ರಾದೇಶಿಕ ಸಾರಿಗೆ ಕಚೇರಿ ಅಧೀಕ್ಷಕ ನರಸಪ್ಪ ಸೇರಿದಂತೆ ವಾಹನ ಚಾಲಕರು,ಸವಾರರು,ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಸೇವಾ ನ್ಯೂನತೆ: ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಿಂದ ತೀರ್ಪು ಪ್ರಕಟ

**ಕೊಪ್ಪಳ :** ಫಿರ್ಯಾದುದಾರರಿಗೆ ಎದುರುದಾರ ಮಣಪ್ಪುರಂ ಪೈನಾನ್ಸ್ ಲಿಮಿಟೆಡ್ ಕಾರಟಗಿ ಬ್ರಾಂಚ್ ವತಿಯಿಂದ ಉಂಟಾದ ಸೇವಾ ನ್ಯೂನತೆ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು ತೀರ್ಪು ಪ್ರಕಟಿಸಿದೆ.

ಗ್ರಾಹಕ ಫಿರ್ಯಾದು ಸಂಖ್ಯೆ: 38/2024 ರಲ್ಲಿನ ಅಂತಿಮ ತೀರ್ಪಿನ ಸಾರಾಂಶದ ಅನ್ವಯ ಫಿರ್ಯಾದುದಾರರಾದ ಕೊಪ್ಪಳ ಜಿಲ್ಲೆಯ ಗಂಗಾವತಿಯ ಮುರಾರಿ ನಗರದ ವ್ಯಾಪಾರಿ ಸೈಯದ್ ಸುಭಾನಿ ಪಾಷ ತಂದೆ ಸೈಯದ್ ಅಬ್ದುಲ್ ಹಮೀದ್ ಇವರು ತಮ್ಮ ವ್ಯಾಪಾರದ ಅವಶ್ಯಕತೆಗಾಗಿ 4 ಹಂತಗಳಲ್ಲಿ 2020ರ ಜುಲೈ 16 ರಿಂದ 2020ರ ಜುಲೈ 30ರವರೆಗೆ ಒಟ್ಟು 393.800 ಗ್ರಾಂ ಬಂಗಾರದ ಆಭರಣಗಳನ್ನು ಎದುರುದಾರರಾದ ಮಣಪ್ಪುರಂ ಪೈನಾನ್ಸ್‌ಲಿಮಿಟೆಡ್‌ಕಾರಟಗಿಬ್ರಾಂಚ್,ತಾ:ಗಂಗಾವತಿ ಜಿಲ್ಲೆ: ಕೊಪ್ಪಳ ಇವರಲ್ಲಿ ಅಡವಿಟ್ಟು ಒಟ್ಟು 12,30,555 ರೂ.ಗಳನ್ನು ಸಾಲವಾಗಿ ಪಡೆದುಕೊಂಡಿರುತ್ತಾರೆ. ದೂರುದಾರರಾದ ಸೈಯದ್ ಸುಭಾನಿ ಪಾಷ ರವರು ಅಸಲು ಮತ್ತು ಬಡ್ಡಿಯನ್ನು ಮಣಪ್ಪುರಂ ಗೋಲ್ಡ್ ಪೈನಾನ್ಸ್ ರವರು, ಹರಾಜು ಪ್ರಕ್ರಿಯೆ ಪೂರ್ವದಲ್ಲಿ ದೂರುದಾರರಿಗೆ ನೋಟಿಸ್ ಸಹ ನೀಡದೇ ನಿಯಮಬಾಹಿರವಾಗಿ ಹರಾಜು ಮಾಡಿ ಸೇವಾ ನ್ಯೂನತೆಯನ್ನು ಎಸಗಿರುತ್ತಾರೆ ಹಾಗೂ ದೂರುದಾರರುಅಡವಿಟ್ಟಬಂಗಾರದಆಭರಣಗಳನ್ನು ಕಾನೂನಿನಪ್ರಕ್ರಿಯೆಪಾಲಿಸದೇನಿಯಮಬಾಹಿರವಾಗಿ ಹರಾಜು ಮುಖಾಂತರ ಮಾರಾಟ ಮಾಡಿ, ಅನುಚಿತ ವ್ಯಾಪಾರ ಪದ್ಧತಿ ಅನುಸರಿಸಿರುತ್ತಾರೆ. ದೂರುದಾರನು ವಕೀಲರ ಮೂಲಕ ನೋಟಿಸ್ ನೀಡಿದಾಗ್ಯೂ ಸಹ ಸ್ಪಂದಿಸದೇ ನಿರ್ಲಕ್ಷ್ಯ ತೋರಿರುತ್ತಾರೆ. ದೂರುದಾರರು ಎದುರುದಾರರ ವರ್ತನೆಯಿಂದ ಬೇಸತ್ತು ಎದುರುದಾರರಾದ ಮಣಪ್ಪುರಂ ಪೈನಾನ್ಸ್ ಲಿಮಿಟೆಡ್ ರವರ ವಿರುದ್ದ ಕೊಪ್ಪಳ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ದೂರನ್ನು ಸಲ್ಲಿಸಿರುತ್ತಾರೆ.

ಈ ದೂರನ್ನು ದಾಖಲಿಸಿಕೊಂಡ ಕೊಪ್ಪಳ ಜಿಲ್ಲಾ ಆಯೋಗದ ಅಧ್ಯಕ್ಷರಾದ ಜಿ.ಇ.ಸೌಭಾಗ್ಯಲಕ್ಷ್ಮೀ ಹಾಗೂ ಸದಸ್ಯರಾದ ರಾಜು.ಎನ್.ಮೇತ್ರಿ ರವರು ಉಭಯ ಪಕ್ಷಗಾರರ ವಾದ ಪ್ರತಿವಾದಗಳನ್ನು ಆಲಿಸಿ, ಎದುರುದಾರರಿಂದ ಉಂಟಾದ ಸೇವಾ ನ್ಯೂನತೆಗಾಗಿ ಹಾಗೂ ಅನುಚಿತ ವ್ಯಾಪಾರ ಪದ್ಧತಿ ಅನುಸರಿಸಬೇಕಾಗಿರುವುದರಿಂದ ಎದುರುದಾರ ಮಣಪ್ಪುರಂ ಪೈನಾನ್ಸ್ ಲಿಮಿಟೆಡ್‌ರವರು ದೂರುದಾರರು ಅಡವಿಟ್ಟ ಬಂಗಾರದ ಆಭರಣಗಳನ್ನು ನಿಯಮಬಾಹಿರವಾಗಿ ಹರಾಜು ಮಾಡಿ ಸೇವಾ ನ್ಯೂನತೆ ಎಸಗಿರುವುದ್ದಕ್ಕಾಗಿ ಪರಿಹಾರವಾಗಿ 1,00,000 ರೂ.ಗಳಿಗೆ ವಾರ್ಷಿಕ ಶೇ.6ರ ಬಡ್ಡಿಯಂತೆ ದೂರುದಾರರಿಗೆ ನೀಡುವಂತೆ ಆದೇಶಿಸಿರುತ್ತಾರೆ ಹಾಗೂ ದೂರುದಾರರಿಗೆ ಉಂಟಾದ ಮಾನಸಿಕ ಯಾತನೆಗಾಗಿ 10,000 ರೂ.ಗಳನ್ನು ಹಾಗೂ ದೂರಿನ ಖರ್ಚು 5000 ರೂ.ಗಳನ್ನು ಈ ಆದೇಶದ ದಿನಾಂಕದಿಂದ 45 ದಿನಗಳ ಒಳಗಾಗಿ ಎದುರುದಾರರು ದೂರುದಾರರಿಗೆ ಪಾವತಿಸುವಂತೆ ಆದೇಶವನ್ನು ನೀಡಿರುತ್ತಾರೆ ಎಂದು ಕೊಪ್ಪಳ ಜಿಲ್ಲಾ ಗ್ರಾಹಕರ ಆಯೋಗದ ಸಹಾಯಕ ರಿಜಿಸ್ಟ್ರಾರ ಹಾಗೂ ಸಹಾಯಕ ಆಡಳಿತಾಧಿಕಾರಿ ಪಿ.ಎಸ್ ಅಮರದೀಪ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


# ಶ್ರೀ ಗವಿಸಿದ್ಧೇಶ್ವರ ಉತ್ಸವ ಮೂರ್ತಿಯ ಮೆರವಣಿಗೆ



**ಕೊಪ್ಪಳ :** ಶ್ರೀ ಗವಿಸಿದ್ಧೇಶ್ವರ ಉತ್ಸವ ಮೂರ್ತಿಯ ಮೆರವಣಿಗೆಯು ಇಂದು ಸಾಯಂಕಾಲ 05.00 ಗಂಟೆಗೆಆರಂಭಗೊಂಡು ಸಂಜೆ ಶ್ರೀ ಗವಿಮಠತಲುಪಿತು. ಜಡೇಗೌಡರ ಮನೆಯಿಂದ ಪ್ರಾರಂಭಗೊಂಡುಕೋಟೆ ಮಠದಿಂದ ಪಲ್ಲಕ್ಕಿ ಹೊರಟುಗಡಿಯಾರ ಕಂಬ ವೃತ್ತದಲ್ಲಿ, ಮುದ್ದಾಬಳ್ಳಿಯಿಂದ ಬರುವ ಶ್ರೀ ಗವಿಸಿದ್ಧೇಶ್ವರ ಉತ್ಸವ ಮೂರ್ತಿಯು,ಹಲಗೇರಿಗ್ರಾಮದ ಸದ್ಭಕ್ತರಾದ ಲಿಂ.ಶ್ರೀ ವೀರನಗೌಡರು ಪಾಟೀಲ ಮತ್ತುಧರ್ಮಪತ್ನಿ ಶ್ರೀಮತಿ ಗಿರಿಜಮ್ಮ ಪಾಟೀಲರ ಮನೆಯಿಂದ ಬರುವ ಕಳಸ ಹಾಗೂ ಮಂಗಳಾಪೂರದಿಂದ ಬರುವ ಶ್ರೀ ಗವಿಸಿದ್ಧೇಶ್ವರ ಉತ್ಸವ ಮೂರ್ತಿಯುಜವಾಹರ್‌ರಸ್ತೆಯಲ್ಲಿಕೂಡಿಕೊಂಡುಕಿತ್ತೂರುರಾಣಿಚೆನ್ನಮ್ಮಸರ್ಕಲ್, ಕವಲೂರುಓಣಿ, ಸಿದ್ದೇಶ್ವರ ವೃತ್ತದ ಗವಿಶ್ರೀ ನಗರದ 3ನೇ ಮುಖ್ಯರಸ್ತೆ ಮೂಲಕ ಭವ್ಯ ಮೆರವಣಿಗೆ ಬಹಳ ಸಡಗರ, ಸಂಭ್ರಮದಿಂದಜರುಗಿತು.

ಇದರಲ್ಲಿ ನಂದಿಕೋಲು, ಡೊಳ್ಳು, ಭಜನೆ, ಭಾಜಾ-ಭಜಂತ್ರಿ, ಪಂಜು, ಇಲಾಲು ಹಾಗೂ ನಾಡಿನ ವೈಭವವನ್ನು ಬಿಂಬಿಸುವ ಅನೇಕ ಜಾನಪದ ವಿಶೇಷ ಕಲಾ ತಂಡಗಳು ಈ ಮೆರವಣಿಗೆಯಲ್ಲಿ ಭಾಗವಹಿಸಿ ಮೆರವಣಿಗೆಗೆ ಮೆರಗುತಂದವುಈ ಮೆರವಣಿಗೆಯಲ್ಲಿ ಸಹಸ್ರಾರುಸದ್ಭಕ್ತರು ಹಾಗೂ ಗೌಡರ ಮನೆತನದವರು ಪಾಲ್ಗೊಂಡಿದ್ದರು.

# ಜಹಗಿರ್‌ಗುಡುದೂರಿನ ಸ್ನೇಹಜೀವಿ ಸೇವಾ ಮಂಡಳಿಯಿಂದ ಶ್ರೀ ಗವಿಸಿದ್ಧೇಶ್ವರ ದ್ವಾರಬಾಗಿಲಕ್ಕೆ ದೀಪಾಲಂಕಾರ



**ಕೊಪ್ಪಳ :** ದಕ್ಷಿಣ ಭಾರತದ ಕುಂಭಮೇಳವೆಂದು ಪ್ರಖ್ಯಾತಿ ಪಡೆದ ಶ್ರೀ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವಧಾರ್ಮಿಕ ಸಾಮಾಜಿಕ ಸಾಂಪ್ರದಾಯಿಕ ಕಾರ್ಯಕ್ರಮಗಳ ಸಂಗಮ. ಶ್ರೀ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವ ನಿಮಿತ್ಯ ನಾಡಿನ ಅನೇಕ ಭಕ್ತರು ವಿವಿಧ ವಿಶಿಷ್ಟ ಭಕ್ತಿ ಸೇವೆಗಳನ್ನು ಸಲ್ಲಿಸುವುದರ ಮೂಲಕ ಭಕ್ತಿಅರ್ಪಿಸುವದುಅಪ್ಯಾಯಮಾನ ಹಾಗೆಯೇಜಹಗಿರ್‌ಗುಡುದೂರಿನ ಸ್ನೇಹಜೀವಿ ಲೈಟಿಂಗ್‌ಅರೇಂಜ್ಮೆಂಟ್ ಸೇವಾ ಮಂಡಳಿಯಿಂದ ಮಹಾ ಜಾತ್ರೋತ್ಸವಕ್ಕೆ ವಿವಿಧ ಬಣ್ಣ ಬಣ್ಣದ ವಿಶಿಷ್ಟ ಆಕರ್ಷಕ ಲೈಟಿಂಗ್ ಗಳನ್ನ ಗಂಜವೃತ್ತದಲ್ಲಿರುವ ಶ್ರೀ ಗವಿಸಿದ್ದೇಶ್ವರ ಮಹಾದ್ವಾರಕ್ಕೆತಮ್ಮ ಸೇವಾ ಸಮಿತಿ ವತಿಯಿಂದಉಚಿತವಾಗಿ ದೀಪ ಅಲಂಕಾರ ಗೊಳಿಸುವ ಮೂಲಕ ಜಾತ್ರಿಯ ವಿದ್ಯುತ್ ದೀಪ ಅಲಂಕಾರಕ್ಕೆ ಮತ್ತಷ್ಟು ಮೆರಗುತಂದಿದ್ದಾರೆ.

ಭಕ್ತರಿಗೆಆಹ್ವಾನ ನೀಡುವಸ್ವಾಗತಕೋರುವ, ಹೂವು, ಗವಿಶ್ರೀಹೆಸರು.ಹೆಲಿಕ್ಯಾಪ್ಟರ್.ಛತ್ರಿ,ಶ್ರೀಶಿವಶಾಂತವೀರ ಸ್ವಾಮೀಜಿಯವರ ಭಾವಚಿತ್ರವಿರುವ ವಿವಿಧ ಬಣ್ಣ ಬಣ್ಣದ ವಿದ್ಯುತ್ ದೀಪ ಅಲಂಕಾರ ಮಾಡಿದ್ದಾರೆ. 7 ಜನಯುವಕರುಒಂದು ದಿನ ಪೂರ್ತಿಯಾಗಿ ಈ ದೀಪಾಲಂಕಾರದ ಅಲಂಕಾರಿಕೆಯಲ್ಲಿ ತೊಡಗಿಕೊಂಡು ಸೇವೆಗೈದಿರುತ್ತಾರೆ. ಶ್ರೀ ಗವಿಸಿದ್ದೇಶ್ವರ ದ್ವಾರಬಾಗಿಲು ಈಗಾಗಲೇ ನೋಡಲುಭವ್ಯವಾಗಿದ್ದುವಿದ್ಯುತ್‌ದೀಪ ಅಲಂಕಾರಗಳಿಂದ ದ್ವಾರಬಾಗಿಲಿನ ಸೌಂದರ್ಯ ದುಪ್ಪಟ್ಟುಗೊಂಡು ನೋಡುಗರ ಆಕರ್ಷಣೆಗೆ ಕಾರಣವಾಗಿದೆ. ಯುವಕರ ಭಕ್ತಿಯ ಸೇವೆಯನ್ನು ಪರಮ ಪೂಜ್ಯರು ಪ್ರಶಂಶಿಸಿ ಆಶೀರ್ವದಿಸಿದ್ದಾರೆ ಎಂದು ಗವಿಮಠದ ಪ್ರಕಟಣೆ ತಿಳಿಸಿದೆ.

# ಇಂಡಿ: ತಾಯಿ ಗುರುವಿನ ಋಣ ತೀರಿಸಲು ಸಾಧ್ಯವಿಲ್ಲ

**ಇಂಡಿ :** ಜೀವನದಲ್ಲಿ ನಾವು ಎಲ್ಲರ ಋಣ ತೀರಿಸಲು ಸಾಧ್ಯವಿದೆ.ಗುರು ತಾಯಿಯ ಋಣ ತೀರಿಸಲು ಸಾಧ್ಯವಿಲ್ಲ, ಆದರೆ ಶ್ರೀ ಸಿದ್ದೇಶ್ವರ ಶ್ರೀಗಳು ಕೇವಲ ಗುರುವಲ್ಲ ಜತೆಗೆ ಪ್ರತಿಯೊಬ್ಬರಿಗೂ ತಾಯಿಯ ಮಾತೃವಾತ್ಸಲ್ಯ ತೋರಿದ ಮಹಾನ ಸಂತ ಎಂದು ಬೀದರ ಭಾಲ್ಕಿ ಸಂಸ್ಥಾನ ಮಠದ ಪರಮಪೂಜ್ಯ ಶ್ರೀ ಬಸವಲಿಂಗ ಪಟ್ಟದೇವರು ಹೇಳಿದರು.

ತಾಲೂಕಿನ ಅಥರ್ಗಾ ಗ್ರಾಮದ ಗುರುದೇವಾಶ್ರಮದಲ್ಲಿ ಜ್ಞಾನಯೋಗಿ ಪರಮಪೂಜ್ಯ ಶ್ರೀ ಸಿದ್ದೇಶ್ವರ ಶ್ರೀಗಳ ಗುರುವಂದನಾಮತ್ತುಮಾತೃಶಕ್ತಿಸಂಗಮಕಾರ್ಯಕ್ರಮದಲ್ಲಿ ಮಾತನಾಡಿದರು.

ಅನ್ನ ನೀಡಿದ ತಾಯಿ, ಭೂ ತಾಯಿ, ನಾಡು ತಾಯಿ, ನುಡಿ ತಾಯಿ, ಜಲ ತಾಯಿ, ನಿಸರ್ಗ ತಾಯಿ ಹೀಗೆ ತಾಯಿಯನ್ನು ಕಾಣುತ್ತೇವೆ ಎಂದು ತಮ್ಮ ಪ್ರವಚನದಲ್ಲಿ ಹೇಳುತ್ತಿದ್ದ ಶ್ರೀಗಳು ಸ್ವಾಮಿ ವಿವೇಕಾನಂದ, ಶಿವಾಜಿ, ಭಗತಸಿಂಗ ಮೊದಲಾದವರಿಗೆ ತಾಯಿಯೇ ಪ್ರೇರಣೆಯಾಗಿದ್ದರು. ಹೀಗಾಗಿ ನಾವು ತಾಯಿಯ ಋಣ ತೀರಿಸಲು ಸಾಧ್ಯವಿಲ್ಲ ಎಂದು ಶ್ರೀಗಳು ಹೇಳುತ್ತಿದ್ದುದು ಅಷ್ಟೇ ನೈಜವಿದೆ ಎಂದರು.

ಇಳಕಲ್ಲ ಚಿತ್ತರಗಿ ಶ್ರೀ ವಿಜಯ ಮಹಾಂತೇಶ ಸಂಸ್ಥಾನಮಠದ ಗುರು ಮಹಾಂತ ಶ್ರೀಗಳು ಮಾತನಾಡಿ ಸಿದ್ದೇಶ್ವರ ಶ್ರೀಗಳು ಪ್ರವಚನದಿಂದ ಸನ್ಮಾರ್ಗ ತೋರಿದ ಮಹಾನ್ ಸಂತ.ಅವರ ಪ್ರವಚನದಲ್ಲಿ ಮಹಿಳೆಗೆ ಗೌರವ ನೀಡುವ ಸಂಸ್ಕಾರ ಸಂಸ್ಕೃತಿ ಬೆಳೆಸಿದರು. ಕನ್ನಡ ಇಂಗ್ಲೀಷ ಮರಾಠಿಯಲ್ಲಿ ಪ್ರವಚನ ನೀಡಿ ಪ್ರವಚನದ ಮೂಲಕ ಬದುಕಿಗೆ ಸನ್ಮಾರ್ಗ ಬೆಳಕು ತೋರಿದ ಮಹಾನ ಸಂತ ಎಂದರು.

ಗುರುದೇವಾಶ್ರಮ ಅಥರ್ಗಾದ ಈಶ ಪ್ರಸಾದ ಶ್ರೀಗಳು, ವಿರಕ್ತಿಮಠದ ಮುರಗೇಂದ್ರ ಶ್ರೀಗಳು, ಖ್ಯಾತ ಚಿಕ್ಕ ಮಕ್ಕಳ ಹೃದ್ರೋಗ ತಜ್ಞೆ ಡಾ॥ ವಿಜಯಲಕ್ಷ್ಮೀ ಬಾಳೇಕುಂದ್ರಿ, ಉಡುಪಿಯ ಖ್ಯಾತ ಉಪನ್ಯಾಸಕಿ ಅಕ್ಷಯಾ ಗೋಖಲೆ, ಜಂಟಿ ಆಯುಕ್ತರು ಹುಬ್ಬಳ್ಳಿ ಆದಾಯ ತೆರಿಗೆ ಇಲಾಖೆಯ ರವೀಂದ್ರ ಹತ್ತಳ್ಳಿ, ಸಂತ ಸಾಯಿ ಆಂಗ್ಲ ಮಾಧ್ಯಮ ಶಾಲೆ ಪುಣೆಯ ಶಿವಲಿಂಗ ಧವಳೇಶ್ವರ, ಸೋಲಾಪುರದ ಅಜಯ ಜಾಧವ ಮಾತನಾಡಿದರು.

## ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಉತ್ಸವ-2025

# ರಾಯಣ್ಣನ ಇತಿಹಾಸ ಅರಿತು ರಾಷ್ಟ್ರಪ್ರೇಮ ಬೆಳೆಸಿಕೊಳ್ಳಬೇಕು: ಶಾಸಕ ಮಹಾಂತೇಶ ಕೌಜಲಗಿ



**ಬೆಳಗಾವಿ :** ರಾಣಿ ಕಿತ್ತೂರು ಚೆನ್ನಮ್ಮರನ್ನು ನೆನೆದರೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸ್ಮರಿಸಲೇಬೇಕು. ಬ್ರಿಟಿಷ್ ವಿರುದ್ಧ ಹೋರಾಟದ ಕಿಚ್ಚು ಹಚ್ಚಿ ತಮ್ಮ ಬಲಿದಾನಗಳ ಮೂಲಕ ಸ್ವಾತಂತ್ರ್ಯ ತಂದು ಕೊಟ್ಟಿದ್ದಾರೆ. ಇಂದಿನ ಯುವ ಸಮೂಹ ರಾಯಣ್ಣನ ಇತಿಹಾಸ ಅರಿತು ರಾಷ್ಟ್ರಪ್ರೇಮ ಬೆಳೆಸಿಕೊಳ್ಳಬೇಕು ಎಂದು ಬೈಲಹೊಂಗಲ ಶಾಸಕರು ಹಾಗೂ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಅಧ್ಯಕ್ಷರಾದ ಮಹಾಂತೇಶ ಕೌಜಲಗಿ ಅವರು ಕರೆ ನೀಡಿದರು.

ಬೆಳಗಾವಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ರವಿವಾರ (ಜ.12) ಸಂಗೊಳ್ಳಿ ಶಾಲಾ ಆವರಣದಲ್ಲಿ ನಡೆದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಉತ್ಸವ -2025 ರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮುಖ್ಯಮಂತ್ರಿಗಳ ಆಶ್ವಾಸನೆಯಂತೆ ಸಂಗೊಳ್ಳಿಯಲ್ಲಿ ರಾಕ್ ಗಾರ್ಡನ್ ಹಾಗೂ ಸೈನಿಕ ಶಾಲೆ ನಿರ್ಮಾಣ ಮಾಡಿ ಈಗಾಗಲೇ ಲೋಕಾರ್ಪಣೆಗೊಳಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಈ ಭಾಗದ ಅಭಿವೃದ್ಧಿಗೆ ಬಹಳಷ್ಟು ಯೋಜನೆಗಳನ್ನು ಜಾರಿಗೆ ತಂದಿದ್ದಾರೆ ಎಂದರು.

ಅದೇ ರೀತಿಯಲ್ಲಿ ಬೇವಿನಕೊಪ್ಪ ಸೇತುವೆ ನಿರ್ಮಾಣವಾಗಿದೆ. ಏತನೀರಾವರಿ, ಕೃಷಿ, ಶೈಕ್ಷಣಿಕ ಅಭಿವೃದ್ಧಿ ಸೇರಿದಂತೆ ಇನ್ನೂ ಅನೇಕ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು.

ರಾಣಿ ಚನ್ನಮ್ಮ, ಸಂಗೊಳ್ಳಿ ರಾಯಣ್ಣ, ಅಮಟೂರು ಬಾಳಪ್ಪ ಸೇರಿದಂತೆ ಬಹುಪಾಲು ಸ್ವಾತಂತ್ರ್ಯ ಹೋರಾಟಗಾರರು ಈ ಭಾಗದವರೇ ಆಗಿದ್ದಾರೆ ಎಂಬುದು ಹೆಮ್ಮೆಯ ವಿಚಾರ ಎಂದು ಶಾಸಕ ಮಹಾಂತೇಶ ಕೌಜಲಗಿ ತಿಳಿಸಿದರು.

ಕಿತ್ತೂರು ಕಲ್ಮಠ ಸಂಸ್ಥಾನದ ರಾಜಗುರು ಶ್ರೀ ಮಡಿವಾಳ ರಾಜಯೋಗೀಂದ್ರ ಮಹಾಸ್ವಾಮಿಗಳು ಮಾತನಾಡಿ ತಾಯಿಗೆ ನೀಡಿದ ಮಾತಿನಂತೆ ಸಂಗೊಳ್ಳಿ ರಾಯಣ್ಣ ತಾಯಿ ನಿಷ್ಠೆ ಮೆರೆದಿದ್ದಾರೆ. ರಾಯಣ್ಣ ಪ್ರಾಮಾಣಿಕತೆ, ಪ್ರಬುದ್ಧತೆಯ ಮಹಾ ಶೂರನಾಗಿದ್ದರು. ಕಿತ್ತೂರು ಚಿಕ್ಕ ಸಂಸ್ಥಾನವಾದರೂ ಇಡೀ ಬ್ರಿಟಿಷ್ ಆಡಳಿತದ ನಿದ್ದೆಗೆಡಿಸಿ ಸ್ವಾತಂತ್ರ್ಯ ಹೋರಾಟದ ಕಿಡಿ ಹೊತ್ತಿಸಿದರು. ಚನ್ನಮ್ಮ, ರಾಯಣ್ಣನ ದಿಟ್ಟತನ ಯುವ ಪೀಳಿಗೆಗೆ ಮೈಗೂಡಿಸಿಕೊಳ್ಳಬೇಕು ಎಂದರು.

ಸರ್ಕಾರದಿಂದ ಶಾಲಾ ಪಠ್ಯಕ್ರಮದಲ್ಲಿ ಚನ್ನಮ್ಮ, ಸಂಗೊಳ್ಳಿ ರಾಯಣ್ಣ ಸೇರಿದಂತೆ ಈ ನಾಡಿನ ವೀರರ ಪರಿಚಯ ಆಗಬೇಕಿದೆ. ದೆಹಲಿ ಪಾರ್ಲಿಮೆಂಟ್ ನಲ್ಲಿ ಸಂಗೊಳ್ಳಿ ರಾಯಣ್ಣ ಮೂರ್ತಿ ಸ್ಥಾಪನೆ ಆಗಬೇಕಿದೆ.

ಬೆಳಗಾವಿ ವಿಮಾನ ನಿಲ್ದಾಣಕ್ಕೆ ರಾಣಿ ಚನ್ನಮ್ಮ ಹಾಗೂ ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ಸಂಗೊಳ್ಳಿ ರಾಯಣ್ಣ ಹೆಸರು ನಾಮಕರಣ ಆಗಬೇಕು ಎಂಬುದು ಜನರ ಬೇಡಿಕೆಯಾಗಿದೆ. ಅವರ ದೇಶಪ್ರೇಮವನ್ನು ನಾವೆಲ್ಲರೂ ಪ್ರೇರಣೆಯಾಗಿ ತೆಗೆದುಕೊಳ್ಳಬೇಕು ಎಂದು ಶ್ರೀ ಮಡಿವಾಳ ರಾಜಯೋಗೀಂದ್ರ ಮಹಾಸ್ವಾಮಿಗಳು ತಿಳಿಸಿದರು.

ಸಂಗೊಳ್ಳಿ ರಾಯಣ್ಣ ಒಡನಾಟದಲ್ಲಿದ್ದ ಬಿಚ್ಚುಗತ್ತಿ ಚನ್ನಪಸಪ್ಪನವರ ಮೂರ್ತಿ ಸಂಗೊಳ್ಳಿಯಲ್ಲಿ ನಿರ್ಮಾಣವಾಗಬೇಕಿದೆ. ರಾಯಣ್ಣನ ಇತಿಹಾಸ ಪರಿಚಯಿಸುವ ರಾಕ್ ಗಾರ್ಡನ್ ಈಗಾಗಲೇ ನಿರ್ಮಾಣವಾಗಿದೆ ಸಾಕಷ್ಟು ಪ್ರೇಕ್ಷಕರನ್ನು ಆಕರ್ಷಿಸಿದೆ

ಸಂಗೊಳ್ಳಿಯ ಶ್ರೀ ಗುರು ಸಿದ್ಧಲಿಂಗೇಶ್ವರ ಹಿರೇಮಠ ಸಂಸ್ಥಾನದ ಶ್ರೀ ಗುರುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ರಾಕ್ ಗಾರ್ಡನ್ ವೀಕ್ಷಣೆಗೆ ಬಹಳಷ್ಟು ದೂರದಿಂದ ಸಾರ್ವಜನಿಕರು, ಶಾಲಾ ಕಾಲೇಜು ಮಕ್ಕಳು ಬರುತ್ತಿದ್ದಾರೆ. ಹಾಗಾಗಿ ಮುಂಬರುವ ದಿನಗಳಲ್ಲಿ ಬರುವ ವೀಕ್ಷಕರಿಗೆ ರಾಕ್ ಗಾರ್ಡನ್ ಪ್ರವೇಶ ದರ 50% ಇಳಿಕೆ ಮಾಡಬೇಕು ಇದರಿಂದ ಸಾರ್ವಜನಿಕರಿಗೆ ಅನುಕಲಾಗಲಿದೆ ಎಂದು ಹೇಳಿದರು.

ಬೈಲಹೊಂಗಲ ಉಪವಿಭಾಗಾಧಿಕಾರಿ ಪ್ರಭಾವತಿ ಫಕೀರಪೂರ, ಬೈಲಹೊಂಗಲ ತಹಶೀಲ್ದಾರ್ ಹಣಮಂತ ಶಿರಹಟ್ಟಿ, ಬೈಲಹೊಂಗಲ ಉಪ ಅಧೀಕ್ಷಕ ರವಿ ನಾಯಕ,

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕಿ ವಿದ್ಯಾವತಿ ಭಜಂತ್ರಿ, ಸವದತ್ತಿ ಸಹಶೀಲ್ದಾರ್ ಮಲ್ಲಿಕಾರ್ಜುನ್ ಹೆಗ್ಗನವರ, ಕಿತ್ತೂರು ತಹಶೀಲ್ದಾರ್ ರವೀಂದ್ರ ಹಾದಿಮನಿ, ಸಂಗೊಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷರೂಪಾ ಚಚಡಿ, ಉಪಾಧ್ಯಕ್ಷ ಫಕೀರಪ್ಪ ಕೋರಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಛತ್ರಪತಿ ಶಿವಾಜಿ ಮೂರ್ತಿ ಸ್ಥಾಪನೆ ಕಾಮಗಾರಿಗೆ ಚಾಲನೆ



**ಬೆಳಗಾವಿ :** ಬೆಳಗಾವಿ ಗ್ರಾಮೀಣ ಕ್ಷೇತ್ರದ ಸುಳೇಭಾವಿ ಗ್ರಾಮದಲ್ಲಿ ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಮೂರ್ತಿಯ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಮೂರ್ತಿ ಅಳವಡಿಸುವ ಅಡಿಪಾಯದ ಕಾಂಕ್ರೀಟ್ ಕಾಮಗಾರಿಗೆ ಯುವ ಕಾಂಗ್ರೆಸ್ ಮುಖಂಡ ಮೃಣಾಲ ಹೆಬ್ಬಾಳಕರ್ ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಸೇರಿ ಭಾನುವಾರ ಪೂಜೆ ನೆರವೇರಿಸಿ, ಚಾಲನೆ ನೀಡಿದರು.

ಈ ಸಮಯದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಫಕೀರವ್ವ ಅಮರಾಪೂರ್, ಗ್ರಾಮ ಪಂಚಾಯತಿಯ ಸರ್ವ ಸದಸ್ಯರು, ಬಸನಗೌಡ ಹುಂಕ್ರಿಪಾಟೀಲ, ದತ್ತಾ ಬಂಡಿಗಣಿ, ನಾನಪ್ಪ ಪಾರ್ವತಿ, ಚಂಬು ಯಮೋಜಿ, ಮುರಗೇಶ್ ಹಂಪಿಹೊಳಿ, ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಮಹೇಶ ಸುಗಣೆನ್ನವರ, ಫಕೀರ್ ಕೋಲಕಾರ್ ಮುಂತಾದವರು ಉಪಸ್ಥಿತರಿದ್ದರು.

# ಶಾಂತಿನಿಕೇತನ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಸ್ನೇಹ ಸಮ್ಮೇಳನ



**ವಿಜಯಪುರ :** ನಗರದ ಪ್ರತಿಷ್ಠಿತ ಶಾಂತಿನಿಕೇತನ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ 2024-25ನೇ ಸಾಲಿನ 24ನೇ ಶಾಂತಿನಿಕೇತನ ಸಾಂಸ್ಕೃತಿಕ ಉತ್ಸವ ಜರುಗಿತು.

ಮರ್ಸಿಡಿಸ್ ಬೆಂಚ್ ರಿಸರ್ಚ ಆಂಡ್ ಡೆವಲಪ್‌ಮೆಂಟ್ ಇಂಡಿಯಾದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಾಲೆಯ ಹಳೆಯ ವಿದ್ಯಾರ್ಥಿನಿ ಕುಮಾರಿ ಡಿ. ರಾಧಾ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ,ಜೀವನದಲ್ಲಿಸಾಧನೆಮಾಡಲು ಪರೀಕ್ಷೆಯಲ್ಲಿ ಪಡೆಯುವ ಅಂಕಗಳು ಮುಖ್ಯವಾಗುವುದಿಲ್ಲ. ಕಲಿಕೆಯಲ್ಲಿ ಎಲ್ಲವೂ ಮುಖ್ಯವಾಗುತ್ತದೆ. ಅವರ ಪ್ರತಿಭೆಗೆ ತಕ್ಕಂತೆ ಕಲಿಯಬೇಕು. ಶಾಂತಿನಿಕೇತನ ಶಾಲೆಯು ಸಾಧನೆ ಮಾಡಲು ಎಲ್ಲರಿಗೂ ಅವಕಾಶವನ್ನು ಕೊಟ್ಟಿದೆ. ಅದನ್ನು ಎಲ್ಲರೂ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಭಾರತದಲ್ಲಿ ಕಿರಿಯ ವಯಸ್ಸಿನಲ್ಲಿಯೇ ಕಮರ್ಷಿಯಲ್ ಪೈಲೆಟ್ ಲೈಸನ್ಸ ಪಡೆದ ಕುಮಾರಿ ಸಮೈರಾ ಹುಲ್ಲೂರ ಅವರು ಅತಿಥಿಗಳಾಗಿ ಆಗಮಿಸಿದ್ದರು.

ಈ ಸಂದರ್ಭದಲ್ಲಿ ದಿವ್ಯ ಸಾನ್ನಿಧ್ಯವನ್ನು ವಹಿಸಿದಪ.ಪೂ.ಶ್ರೀಯೋಗೇಶ್ವರಿಮಾತಾಜಿ ಆಶೀರ್ವಚನ ನೀಡಿ, ಪಾಲಕರು ತಮ್ಮ ಮಕ್ಕಳಿಗೆ ನಮ್ಮ ಭಾರತೀಯ ಸಂಸ್ಕಾರವನ್ನು ಕಲಿಸಬೇಕು. ಇಂದಿನ ಯುಗದಲ್ಲಿ ಪಾಲಕರ ಪಾತ್ರ ಬಹಳ ಮುಖ್ಯವಾಗಿದೆ. ಎಂದು ನುಡಿದರು.

ಇದೇ ಸಂದರ್ಭದಲ್ಲಿ ಪರಮಪೂಜ್ಯ ಶ್ರೀ ಸಿದ್ಧೇಶ್ವರಸ್ವಾಮಿಗಳುಹಾಗೂರವೀಂದ್ರನಾಥ ಟ್ಯಾಗೋರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನವನ್ನು ಸಲ್ಲಿಸಲಾಯಿತು.

ಇದೇ ಸಂದರ್ಭದಲ್ಲಿ ಶಾಂತಿನಿಕೇತನ ಶಿಕ್ಷಣ ಸಂಸ್ಥೆಯ ಅಧ್ಯಕ್ಷೆ ಶೀಲಾ ಎಸ್ ಬಿರಾದಾರ ಅಧ್ಯಕ್ಷತೆ ವಹಿಸಿ ಮಾತನಾಡಿ, ನಮ್ಮ ಸಂಸ್ಥೆಯು ಅತ್ಯಾಧುನಿಕ ಸೌಲಭ್ಯಗಳನ್ನು ಬಳಸಿ, ವಿದ್ಯಾರ್ಥಿಗಳಲ್ಲಿ ಜ್ಞಾನಾರ್ಜನೆಯನ್ನುಮಾಡಿಸುತ್ತಾಬಂದಿದೆ. ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ, ಸ್ವಾತಂತ್ರ್ಯ, ಇತರರಿಗೆ ಗೌರವ, ಸಾಮಾಜಿಕ ಜವಾಬ್ದಾರಿ, ಸಮಾನತೆ, ಸೌಜನ್ಯ ಮೊದಲಾದ ಗುಣಗಳನ್ನು ಸಂಸ್ಥೆಯು ಬೆಳೆಸುತ್ತಿದೆ. ಪಾಲಕರು 24 ವರ್ಷಗಳಿಂದ ಸಂಸ್ಥೆಯ ಎಲ್ಲ ಚಟುವಟಿಕೆಗಳಿಗೆ ಸಹಕಾರ ಹಾಗೂ ಪ್ರೋತ್ಸಾಹವನ್ನು ನೀಡುತ್ತಾ ಬಂದಿದ್ದು, ಮುಂದೆಯೂ ಸಹ ಇದೇ ರೀತಿ ಪ್ರೋತ್ಸಾಹವನ್ನು ನೀಡಬೇಕು ಎಂದು ನುಡಿದರು.

ಸಂಸ್ಥೆಯ ನಿರ್ದೇಶಕಿ ದಿವ್ಯಾ ಎಸ್ ಬಿರಾದಾರ ಅವರು ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ನಿರ್ದೇಶಕ ಶರತ ಬಿರಾದಾರ, ಭರತ ಬಿರಾದಾರ, ವಿಷ್ಣುಪ್ರಿಯಾಬಿಬಿರಾದಾರ,ನಿರ್ದೇಶಕರಾದ ನಿಖಿಲ ಶೇಖದಾರ, ರಿಜೇಶ್ ಪಿ. ಎನ್., ಪಿ. ಚರಣ ಇದ್ದರು.

ಪ್ರಾಚಾರ್ಯ ಶ್ರೀ ಶ್ರೀಧರ ಕುರಬೆಟ ಶಾಲಾ ವಾರ್ಷಿಕ ವರದಿಯನ್ನು ಓದಿದರು, ಶಾಲಾ ನಾಯಕಿಯರಾದ ಕುಮಾರಿ ಪ್ರೇರಣಾ ಅಂಬಿಗೇರ ಮತ್ತು ಶ್ರೀರಕ್ಷಾ ಪಟ್ಟಣಶೆಟ್ಟಿ ತಮ್ಮ ಅನಿಸಿಕೆ ಹಂಚಿಕೊಂಡರು.

ಶಿಕ್ಷಕಿ ಶ್ರೀದೇವಿ ಜೋಳದ ಸ್ವಾಗತಿಸಿದರು. ಜ್ಯೋತಿ ಅಣ್ಣೆಪ್ಪಣ್ಣವರ ಮತ್ತು ದೀಪಾ ತಿಳಗೂಳ ನಿರೂಪಿಸಿದರು. ತಬಸು ಸಾಂಗ್ಲಿಕರ ವಂದಿಸಿದರು.

ನಂತರ ಸುಮಾರು ಮೂರು ಗಂಟೆಗಳ ಕಾಲ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಕ್ಕಳು ಜಿಲ್ಲೆಯ, ನಾಡಿನ ಹಾಗೂ ದೇಶದ ಸಂಸ್ಕೃತಿಯನ್ನು ಬಿಂಬಿಸುವ ಜಾನಪದ, ಭಕ್ತಿಗೀತೆ ಹಾಗೂ ಚಲನಚಿತ್ರ ಗೀತೆಗಳ ಹಾಡಿಗೆ ಹೆಜ್ಜೆ ಹಾಕಿದರು. ಈ ಕಾರ್ಯಕ್ರಮದಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

# ಮಾರಿಹಾಳದಿಂದ ತುಮ್ಮರಗುದ್ದಿ ರಸ್ತೆ ಕಾಮಗಾರಿಗೆ ಚಾಲನೆ



**ಬೆಳಗಾವಿ :** ಬೆಳಗಾವಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಮಾರಿಹಾಳ ಗ್ರಾಮದಿಂದ ತುಮ್ಮರಗುದ್ದಿ ಗ್ರಾಮದವರೆಗಿನ ರಸ್ತೆಯ ಡಾಂಬರೀಕರಣದ ಕಾಮಗಾರಿಗೆ ಯುವ ಕಾಂಗ್ರೆಸ್ ಮುಖಂಡ ಮೃಣಾಲ್ ಹೆಬ್ಬಾಳಕರ್ ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಸೇರಿ ಚಾಲನೆ ನೀಡಿದರು.

ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರ ವಿಶೇಷ ಪ್ರಯತ್ನದಿಂದ ಹಣ ಮಂಜೂರಾಗಿದ್ದು, ಸುಮಾರು 3 ಕೋಟಿ ರೂ,ಗಳ ವೆಚ್ಚದಲ್ಲಿ ರಸ್ತೆಯ ಡಾಂಬರೀಕರಣ ನಡೆಯಲಿದೆ. ಕಾಮಗಾರಿಗೆ ಚಾಲನೆ ನೀಡಿ, ಗುಣಮಟ್ಟದ ಕಾಮಗಾರಿ ನಡೆಸುವಂತೆ ಮತ್ತು ನಿಗದಿತ ಸಮಯದಲ್ಲಿ ರಸ್ತೆ ಪೂರ್ಣಗೊಳಿಸುವಂತೆ ಗುತ್ತಿಗೆದಾರಿಗೆ ಮೃಣಾಲ ಹೆಬ್ಬಾಳಕರ್ ಸೂಚಿಸಿದರು.

ಈ ಸಮಯದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಗಿರಿಜಾ ಪಾಟೀಲ, ಉಪಾಧ್ಯಕ್ಷರು ಹಾಗೂ ಸರ್ವ ಸದಸ್ಯರು, ಬಸವರಾಜ ಮ್ಯಾಗೋಟಿ, ಸಂಜಯ ಚಾಟೆ, ಸಮೀರ್ ಮುಲ್ಲಾ ವಿನೋದ್ ಚೌಹಾನ್, ಶಂಕರ ಚೌಗುಲೆ, ವಿಠ್ಠಲ ಮಲ್ಲಾರಿ, ಬಾಳೇಶ್, ಪ್ರಕಾಶ, ಗುಡದಪ್ಪ, ಬಸವರಾಜ, ರಮೇಶ ಮುಂತಾದವರು ಉಪಸ್ಥಿತರಿದ್ದರು.

# ಸರಣಿ ಕಳ್ಳತನ ಜನರಲ್ಲಿ ಆತಂಕ



**ಜಮಖಂಡಿ :** ನಗರದಲ್ಲಿ ತಡರಾತ್ರಿಯಲ್ಲಿ ಐದು ಮನೆಗಳು, ಕಿರಾಣಿ ಅಂಗಡಿಯಲ್ಲಿ ಸರಣಿ ಕಳ್ಳತನದ ಘಟನೆ ನಡೆದಿದ್ದು, ಜನರಲ್ಲಿ ಆತಂಕದ ಛಾಯೆ ಮೂಡಿಸಿದೆ.

ನಗರದ ಅರಫತ ಬಡಾವಣೆಯಲ್ಲಿ ಐದು ಮನೆಗಳ ಬೀಗ ಮುರಿದು ಸರಣಿ ಕಳ್ಳತನ ಘಟನೆ ನಡೆದಿದೆ. ತಡರಾತ್ರಿಯಲ್ಲಿ ಕಳ್ಳರು ತಮ್ಮ ಕೈಚಳಕದಿಂದ ಮನೆಗೆ ಹಾಕಿದ್ದ ಬೀಗಗಳನ್ನು ಮುರಿದು ಮನೆಯಲ್ಲಿರುವ ಟ್ರೇಜರಿ ಕಪಾಟುಗಳ ಬಾಗಿಲು ಮುರಿದು ಒಳಗಿರುವ ಬಟ್ಟೆಬರೆ ಸಾಮಾನುಗಳನ್ನು ಚೆಲ್ಲಾಪಿಲ್ಲಿಯಾಗಿ ಎಸೆದಿದ್ದು, ಬೆಲೆಬಾಳುವ ವಸ್ತುಗಳನ್ನು ವಸ್ತುಗಳನ್ನು ಕಳ್ಳತನ ಮಾಡಿದ್ದಾರೆಂದು ನಿವಾಸಿಗಳು ತಿಳಿಸಿದ್ದಾರೆ.

ಅರಫತ ಬಡಾವಣೆಯ ನಿವಾಸಿಗಳಾದ ಲಕ್ಷ್ಮಣ ಭಜಂತ್ರಿ, ಕಲ್ಲಪ್ಪ ಭಜಂತ್ರಿ, ಶಬಾನಾ ಸಗರ, ಫಾರೂಕ ಸಲೀಂ ಪಟೇಲ, ಯುನುಸ್ ಶೇಖ, ಅಲ್ಲಮ್ಮಪ್ರಭು ಉಪ್ಪಿನ ಅವರ ಮನೆಗಳನ್ನು ಹಾಗೂ ಒಂದು ಕಿರಾಣಿ ಅಂಗಡಿಯನ್ನು ತಡ ರಾತ್ರಿಯಲ್ಲಿ ಸರಣಿ ಕಳ್ಳತನ ಮಾಡಿದ್ದಾರೆಂಬ ಮಾಹಿತಿ ಲಭ್ಯವಾಗಿದೆ.

ದಾನಮ್ಮ ಬಡಾವಣೆಯ ಉಪ್ಪಿನ ಅವರ ಕಿರಾಣಿ ಅಂಗಡಿಯ ಮೇಲಿನ ಪತ್ರಾಸ ಕತ್ತರಿಸಿ ಅಂಗಡಿ ಒಳಗಿನ ಚಿಲ್ಲರೆ ಹಣ, ಗುಟ್ಕಾ ಪ್ಯಾಕೇಟ್ಗಳನ್ನು ಕಳ್ಳತನ ಮಾಡಿದ್ದಾರೆ. ಶಹರ ಠಾಣೆ ಪೋಲಿಸರು ಭೇಟಿ ನೀಡುವ ಮೂಲಕ ತನಿಖೆ ಚುರುಕುಗೊಳಿಸಿದ್ದಾರೆ.

# ಮಕ್ಕಳಲ್ಲಿ ಸಮಾಜ ಮತ್ತು ರಾಷ್ಟ್ರಪ್ರಜ್ಞೆ ಬೆಳೆಸಬೇಕು




**ಮಹಾಲಿಂಗಪುರ :** ಇಂದಿನ ದಿನಗಳಲ್ಲಿ ಸಾಮಾಜಿಕ ಜವಾಬ್ದಾರಿ ಮತ್ತು ರಾಷ್ಟ್ರಪ್ರಜ್ಞೆ ಇರುವ ವ್ಯಕ್ತಿಗಳ ಕೊರತೆ ಇರುವುದರಿಂದ, ಮಕ್ಕಳಲ್ಲಿ ಇವುಗಳನ್ನು ಬೆಳೆಸುವದು ಅಗತ್ಯವಿದೆ ಎಂದು ನಿಡಸೋಸಿಯ ಏಕಗಮ್ಯಾನಂದ ನಿಜಲಿಂಗೇಶ್ವರ ಸ್ವಾಮಿಜಿ ಹೇಳಿದರು.

ಸಮೀಪದ ರನ್ನಬೆಳಗಲಿಯ ಪಟ್ಟಣದ ಡಫಳಾಪುರ ವಿದ್ಯಾವಿಹಾರ ಸಿಬಿಎಸ್ಸಿ ಶಾಲೆಯಲ್ಲಿ ರವಿವಾರ ಸಂಜೆ ಜರುಗಿದ ಸ್ವಾಮಿ ವಿವೇಕಾನಂದ ಜಯಂತಿ, ರಾಷ್ಟ್ರೀಯ ಯುವ ದಿನಾಚರಣೆ ಕಾರ್ಯಕ್ರಮದ ಸಾನಿಧ್ಯವಹಿಸಿ ಮಾತನಾಡಿದ ಅವರು ಎಲ್ಲರೂ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಮನೆಯಲ್ಲಿನ ಹಸಿಕಸ-ಒಣಕಸ ಪ್ರತ್ಯೇಕ ಬೇರ್ಪಡಿಸಿ ಸಾವಯವ ಗೊಬ್ಬರ ತಯಾರಿಸುವ ವಿಧಾನಗಳನ್ನು ತಿಳಿಸಿದರಲ್ಲದೇ, ಕಸದಿಂದ ದೇಶದ ನಿರುದ್ಯೋಗ ಸಮಸ್ಯೆ ಮತ್ತು ಆರ್ಥಿಕ ಅಭಿವೃದ್ಧಿಯ ಉಪಾಯಗಳನ್ನು ತಿಳಿಸಿದರು.

ರಾಷ್ಟ್ರೀಯ ಯುವ ದಿನಾಚರಣೆ ಉದ್ಘಾಟಿಸಿದ ಕು. ಅಕ್ಷಯಾ ಗೋಖಲೆಯವರು ಮಾತನಾಡಿ ನಮ್ಮ ಮನೆಯ ಮಕ್ಕಳ ಕೈಯಲ್ಲಿ ಮೊಬೈಲ ಕೊಡದೇ ಪುಸ್ತಕಗಳನ್ನು ನೀಡಬೇಕು. ಮಕ್ಕಳಿಗೆ ವಿದ್ಯೆಯ ಜೊತೆಗೆ ಸಂಸ್ಕಾರ ನೀಡಬೇಕು. ಮುಖ್ಯವಾಗಿ ಅವರು ಜಗತ್ತಿನ ಯಾವುದೇ ಮೂಲೆಯಲ್ಲಿದ್ದರೂ ಸಹ ತಂದೆ-ತಾಯಿಗಳ ಅಂತ್ಯ ಸಂಸ್ಕಾರಕ್ಕಾಗಿ ಮರಳಿ ಮನೆಗೆ ಬರುವಂತಹ ಸಂಸ್ಕಾರವನ್ನು ಇಂದಿನ ಮಕ್ಕಳಿಗೆ ನೀಡಬೇಕಾಗಿದೆ.

ರಾಷ್ಟ್ರ ಮತ್ತು ವ್ಯಕ್ತಿತ್ವ ನಿರ್ಮಾಣ, ಯಶಸ್ಸಿನ ಸೂತ್ರಗಳು ಮತ್ತು ದೃಷ್ಟಿಕೋನ, ವೀರ ಪುರುಷರ ಸಾಧನೆಗಳು, ಮಕ್ಕಳಿಗೆ? ಪ್ರೇರಣೆಯಾದ ಸಾಧಕರ ಸಂಗತಿಗಳ ವಿವರಣೆ, ನನಸಾಗುವ ಕನಸು, ಶಿಸ್ತು, ದೃಢ ನಿರ್ಧಾರಗಳಿಂದ ಮಾತ್ರ ಮಕ್ಕಳ ಸರ್ವಾಂಗೀಣ ಅಭಿವೃದ್ಧಿ ಸಾಧ್ಯವಿದೆ. ಶಿಕ್ಷಕರು, ಪಾಲಕರು ಮಕ್ಕಳಲ್ಲಿ ಆತ್ಮವಿಶ್ವಾಸ, ನಂಬಿಕೆಯನ್ನು ಬೆಳೆಸಬೇಕು ಎಂದರು.

ಶಾಲೆಯ ವ್ಯವಸ್ಥಾಪಕ ವಿವೇಕ ಡಫಳಾಪುರ ಪ್ರಾಸ್ತಾವಿಕವಾಗಿ ಮಾತನಾಡಿ ವರ್ಷದ ಅತ್ಯುತ್ತಮ ವಿದ್ಯಾರ್ಥಿ ಪ್ರಶಸ್ತಿ, ಚಾಂಪಿಯನ್ ಹೌಸ್ ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಕಳೆದ ವರ್ಷ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಆರನೇ ತರಗತಿಯ ವಿದ್ಯಾರ್ಥಿನಿ ಕು. ನಂದಿತಾ ಚಿಮ್ಮಡ ಭಗವದ್ಗೀತೆಯ ಹನ್ನೆರಡನೇ ಅಧ್ಯಾಯದ ಶ್ಲೋಕಗಳನ್ನು ಪಠಿಸಿದಳು. ಪೂರ್ವ ಪ್ರಾಥಮಿಕ ವಿಭಾಗದ ಶ್ರೇಯಸ್ ಮತ್ತು ಶ್ರೇಣಿಕ್ನಿಂದ ಕಾವ್ಯ ವಾಚನ ಮತ್ತು ನಿತೀನ್ ಚಿಕ್ಕ್ಯಾಗೋದ ಸರ್ವಧರ್ಮ ಸಮ್ಮೇಳನದ ವಿಷಯ ಪ್ರಸ್ತುತ ಪಡಿಸಿದನು. ಸೃಜನ್ ಮತ್ತು ಪ್ರಪುಲ್ ಸ್ವಾಮಿ ವಿವೇಕಾನಂದರ ಸ್ಫೂರ್ತಿದಾಯಕ ಆಲೋಚನೆಯ ನುಡಿ ಮುತ್ತುಗಳನ್ನು ಹೇಳಿದರು.

ಅತಿಥಿಗಳು ಶಾಲೆಯಲ್ಲಿನ ಸಮಾಜ ವಿಜ್ಞಾನ ಮತ್ತು ಗಣಿತದ ಪ್ರಯೋಗಾಲಯಗಳನ್ನು ವೀಕ್ಷಿಸಿದರು. ಸ್ವಾಮಿ ವಿವೇಕಾನಂದರ ಭಾವಚಿತ್ರಕ್ಕೆ ಪೂಜೆ ಸಲ್ಲಿಲಾಯಿತು. ವಿದ್ಯಾರ್ಥಿನಿ ಕು. ಅನುಷಾ ಬಡಿಗೇರ ಸ್ವಾಗತಿಸಿ-ನಿರೂಪಿಸಿದರು. ಪ್ರಾಚಾರ್ಯ ಲೂಯಿಸ್ ಬುರೆಟೋ ವಂದಿಸಿದರು.

# ಸ್ವಾಗತ ಫಲಕದ ಉದ್ಘಾಟನೆ




**ಜಮಖಂಡಿ :** ನಗರದ ಜಮಖಂಡಿ ವಿಜಯಪುರ ರಸ್ತೆ ಪಕ್ಕದಲ್ಲಿ ಲಯನ್ಸ ಸಂಸ್ಥೆ ನಿರ್ಮಿಸಿದ ವಾಹನ ಸವಾರರನ್ನು ಸ್ವಾಗತಿಸುವ ಸ್ವಾಗತ ಫಲಕವನ್ನು ಲಯನ್ಸ್ ಸಂಸ್ಥೆ ಮುಖ್ಯಸ್ಥೆ ಅಮೋಲಿ ನಾಯಕ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಲಯನ್ಸ ಅಧ್ಯಕ್ಷ ಚಿನ್ಮಯ ಜಿರಲಿ, ಡಾ. ಹೆಚ್. ಜಿ. ದಡ್ಡಿ, ಡಾ. ಮಂಜುನಾಥ ಮಲಘಾಣ, ಕೀರ್ತಿ ನಾಯಕ, ಕಾರ್ಯದರ್ಶಿ ಪ್ರವೀಣ ಮೈಗೂರ, ಖಜಾಂಚಿ ಸುನೀಲ ಮುರಗೋಡ,

ಸಿದ್ದಪ್ಪ ಕುಂಬಾರ, ನರೇಂದ್ರ ಮಾನೆ, ಪ್ರಕಾಶ ಚೌರಡ್ಡಿ, ರಾಜೇಂದ್ರ ನಾಯಕ, ವಿಜಯ ಕಟಗಿ, ರಾಜಶೇಖರ ಹೊಸಟ್ಟಿ, ರಮೇಶ ಕೋರಿ ಸಹಿತ ಹಲವರು ಉಪಸ್ಥಿತರಿದ್ದರು.

# ಬದಲಾದ ಸನ್ನಿವೇಶಕ್ಕೆ ಹೊಂದಿಕೊಳ್ಳಿ: ಡಾ. ಗಿರಡ್ಡಿ



**ಜಮಖಂಡಿ :** ಜ್ಞಾನ, ಕೌಶಲ ಮತ್ತು ಆತ್ಮ ವಿಶ್ವಾಸ ಹೆಚ್ಚಿಸಿಕೊಂಡು ಬದಲಾದ ಸನ್ನಿವೇಶಕ್ಕೆ ಹೊಂದಿಕೊಂಡು ಶಿಕ್ಷಕ ವೃತ್ತಿಯಲ್ಲಿ ಅಭಿವೃದ್ಧಿ ಹೊಂದಲು ಪುನಶ್ಚೇತನ ಕಾರ್ಯಾಗಾರ ಸಹಾಯಕವಾಗಿದೆ ಎಂದು ಬಸವಜ್ಯೋತಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಡಾ. ಟಿ. ಪಿ. ಗಿರಡ್ಡಿ ಹೇಳಿದರು.

ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹಾಗೂ ವಿಜ್ಞಾನ ವಿಷಯ ಸಮೂಹದ ಆಶ್ರಯದಲ್ಲಿ ಇಲ್ಲಿನ ಬಸವಜ್ಯೋತಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಜಮಖಂಡಿ ಮತ್ತು ರಬಕವಿ-ಬನಹಟ್ಟಿ ತಾಲ್ಲೂಕುಗಳ ಪ್ರೌಢ ಶಾಲೆಗಳ ವಿಜ್ಞಾನ ಶಿಕ್ಷಕರಿಗಾಗಿ ಶನಿವಾರ ಆಯೋಜಿಸಿದ್ದ ಒಂದು ದಿನದ ಪುನಶ್ಚೇತನ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹೊಸ ಕೌಶಲ್ಯಗಳನ್ನು ಕರಗತ ಮಾಡಿಕೊಂಡು ಹಾಗೂ ಈ ಮೊದಲು ಗೊತ್ತಿರುವ ಕೌಶಲ್ಯಗಳನ್ನು ಇನ್ನಷ್ಟು ಸುಧಾರಿಸಿಕೊಂಡು ಪರಿಣಾಮಕಾರಿ ಬೋಧನೆಯಲ್ಲಿ ತೊಡಗಲು ಪುನಶ್ಚೇತನ ಕಾರ್ಯಾಗಾರದಲ್ಲಿ ಪಾಲ್ಗೊಳ್ಳುವುದು ತುಂಬಾ ಅಗತ್ಯವಿದೆ ಎಂದರು.

ಆಡಳಿತಾಧಿಕಾರಿ ಪ್ರೊ. ಬಸವರಾಜ ಕಡ್ಡಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಶಿಕ್ಷಕರಿಗೆ ಮಠಾಧೀಶರಿಗಿಂತ ಹೆಚ್ಚಿನ ಜವಾಬ್ದಾರಿ ಇದೆ. ಆದ್ದರಿಂದ ವಿದ್ಯಾರ್ಥಿಗಳಿಗೆ ಪಾಠದ ಜೊತೆಗೆ ನೈತಿಕತೆ ಬೋಧಿಸಬೇಕು ಎಂದು ಶಿಕ್ಷಕರಿಗೆ ಸಲಹೆ ನೀಡಿದರು.

ಶಿಕ್ಷಣ ಸಂಯೋಜಕ ಎಸ್. ಜಿ. ಬಿಜಾಪುರ ಮುಖ್ಯ ಅತಿಥಿಯಾಗಿ ಮಾತನಾಡಿ, ಎಸ್ಸೆಸ್ಸೆಲ್ಸಿ ಪರೀಕ್ಷೆ ಬಹಳ ಪಾರದರ್ಶಕವಾಗಿ ನಡೆಯಲಿವೆ. ಪರೀಕ್ಷಾ ಕೊಠಡಿಯಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ನಕಲು ಚಟುವಟಿಕೆಗಳಲ್ಲಿ ತೊಡಗಿದರೆ

ವೆಬ್ಕ್ಯಾಮೆರಾ ಮೂಲಕ ಸ್ಕ್ರೀನ್ಶಾಟ್ ಕೇಂದ್ರ ಕಚೇರಿಗೆ ರವಾನಿಯಾಗಲಿದೆ ಎಂದು ಎಚ್ಚರಿಸಿದರು.

ವಿಜ್ಞಾನ ವಿಷಯ ಸಮೂಹದ ನೋಡಲ್ ಅಧಿಕಾರಿ ಡಿ. ಡಿ. ಕಾಂಬಳೆ, ಬಸವಜ್ಯೋತಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಪಿ. ಐ. ಹೊಸಮಠ ಇದ್ದರು. ದೀಕ್ಷಾ ಇಂಗಳಗಿ ಹಾಗೂ ಸಂಗಡಿಗರು ಪ್ರಾರ್ಥನೆ ಗೀತೆ ಹಾಡಿದರು. ಸಂಗೀತ ಶಿಕ್ಷಕಿ ದೀಪಾ ಹಾವಿನಾಳ ಸ್ವಾಗತ ಗೀತೆ ಹಾಡಿದರು. ವಿಜ್ಞಾನ ವಿಷಯ ಸಮೂಹದ ಅಧ್ಯಕ್ಷ ಅಶೋಕ ಮಾಗಿ ಸ್ವಾಗತಿಸಿ, ಅತಿಥಿಗಳನ್ನು ಪರಿಚಯಿಸಿದರು. ಶಿಕ್ಷಕ ಹನಮಂತ ಹಾಲಳ್ಳಿ ಸೊಗಸಾಗಿ ನಿರೂಪಿಸಿದರು. ಶಿಕ್ಷಕ ಜಗದೀಶ ಕಾಂಬಳೆ ವಂದಿಸಿದರು. ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಸಂಪನ್ಮೂಲ ವ್ಯಕ್ತಿ ಭೀಮಪ್ಪ ಬೆಲ್ಲದ ಕಾರ್ಯಾಗಾರದಲ್ಲಿ ಶಿಕ್ಷಕರಿಗೆ ತರಬೇತಿ ನೀಡಿದರು.

## ಸಮಾನತೆಯ ಸಮಾಜ ನಿರ್ಮಾಣಕ್ಕೆ ಮುಂದಾಗಿ: ಡಿಸಿ ಜಾನಕಿ

**ಬಾಗಲಕೋಟೆ :** ಎಲ್ಲರೂ ಸಮಾನತೆಯ ಸಮಾಜ ನಿರ್ಮಾಣ ಮಾಡಲು ಮುಂದಾಗಬೇಕು ಎಂದು ಬಾಗಲಕೋಟೆ ಜಿಲ್ಲಾಧಿಕಾರಿ ಜಾನಕಿ ಕೆಎಂ ಹೇಳಿದರು ನವನಗರದ ಕಲಾಭವನದಲ್ಲಿ ಶನಿವಾರ ನಡೆದ ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆಯ ಶ್ರೀ ಕಾಳಿದಾಸ ಅಂತರಾಷ್ಟ್ರೀಯಪಬ್ಲಿಕ್‌ಶಾಲೆಹಾಗೂಪದವಿಪೂರ್ವ ಕಾಲೇಜು ಮತ್ತು ಹೈಸ್ಕೂಲ್ ವಿಭಾಗದ 5ನೇ ವಾರ್ಷಿಕ ಸಮ್ಮೇಳನದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಇಲ್ಲಿ ನೆರೆದಿರುವವರು ಪಾಲಕರು ಶಿಕ್ಷಕರು ವಿದ್ಯಾರ್ಥಿಗಳು ಎಲ್ಲರೂ ಒಂದೇ ಸಮಾಜದವರಲ್ಲ, ಎಲ್ಲರೂ ವಿವಿಧ ಸಮಾಜದವರಾಗಿದ್ದಿರಿ. ಈ ನಿಟ್ಟಿನಲ್ಲಿ ಉನ್ನತ ಶಿಕ್ಷಣ ಪಡೆದುಕೊಂಡು ಸಮಾನತೆಯ ಸಮಾಜ ನಿರ್ಮಾಣ ಮಾಡಲಿಕ್ಕೆ ಹೆಜ್ಜೆ ಹಾಕಿ ಎಂದು ತಿಳಿಸಿದ ಅವರು ಶ್ರೀ ಕಾಳಿದಾಸ ವಿದ್ಯಾಸಂಸ್ಥೆ, ಈ ಕಾರ್ಯಕ್ರಮವನ್ನು ಅತ್ಯಂತ ಅರ್ಥಪೂರ್ಣ ಮತ್ತು ಕಲರ್ಫುಲ್ ಆಗಿ ಅಚ್ಚುಕಟ್ಟಾಗಿ ಆಯೋಜಿಸಿದ್ದು ಕಳೆದ ಐದು ದಶಕಗಳಿಂದ ಒಂದು ಸಣ್ಣ ಕಟ್ಟಡದಲ್ಲಿ ಪ್ರಾರಂಭವಾದ ಈ ಸಂಸ್ಥೆ ಇಂದು ವಿಶಾಲವಾದ ಕಟ್ಟಡದೊಂದಿಗೆ ಒಳ್ಳೆಯ ಶಿಕ್ಷಣ ನೀಡುತ್ತಿದ್ದು ಹೆಮ್ಮೆಯ ವಿಷಯ ಅದರಂತೆ ವಿದ್ಯಾರ್ಥಿಗಳು ಸಾಮಾಜಿಕ ಪ್ರಜ್ಞೆ, ಪರಿಸರ ಪ್ರಜ್ಞೆ, ಹಾಗೂ ಸಮಯ ಪ್ರಜ್ಞೆಯನ್ನು ಹೊಂದಿರಬೇಕು ಉತ್ತಮ ಸಮಾಜ ನಿರ್ಮಾಣ ಮಾಡಲು ಶಿಕ್ಷಕರ ಜೊತೆ ಪೋಷಕರು ಕೈಜೋಡಿಸಿದಾಗ ಮಾತ್ರ ಇದು ಸಾಧ್ಯವಾಗುತ್ತದೆ ಇಷ್ಟು ದೊಡ್ಡ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಕೊಡುವುದು ಸುಲಭವಲ್ಲ ನಮ್ಮ ದೇಶಕ್ಕೆ ಬೇಕಾಗಿರುವುದು ಒಳ್ಳೆಯ ಪ್ರಜೆಗಳು ನಾವು ಮಾಡೇ ಮಾಡ್ತೀವಿ ಎನ್ನುವ ಯುವ ಸಮೂಹ ಬೇಕಾಗಿದೆ ಈ ಕೆಲಸವನ್ನು ಚೈತನ್ಯಶೀಲದಿಂದ ಮಾಡಲು ವಿದ್ಯಾರ್ಥಿಗಳಲ್ಲಿ ಸಾಮರ್ಥ್ಯವಿದೆ ಎನ್ನುವ ಮನೋಬಲವನ್ನು ಹೆಚ್ಚಿಸುವುದು ಪ್ರತಿಯೊಬ್ಬ ಶಿಕ್ಷಕರ ಜವಾಬ್ದಾರಿಯಾಗಿದ್ದು ಉತ್ತಮ ಗುರಿಗಳನ್ನು ವಿದ್ಯಾರ್ಥಿಗಳು ಇಟ್ಟುಕೊಂಡು ತಮ್ಮ ದೈನಂದಿನ ದಿನಾಚರಣೆ ಸಿದ್ಧತೆಯಲ್ಲಿ ಸಾಗಿದಾಗ ಮಾತ್ರ ಸಾಧಿಸಲು ಅನುಕೂಲವಾಗುತ್ತದೆ. ಕೇವಲ ಒಂದು ದಿನ ಎನ್ನದೆ ಇದು ಅನುದಿನದ ಸಿದ್ಧತೆಯಲ್ಲಿ ಇದ್ದಾಗ ಮಾತ್ರ ಫಲ ಸಿಗಲು ಸಾಧ್ಯ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

## ನೋವು, ಕಷ್ಟಗಳು ನಮ್ಮ ಜೀವನಕ್ಕೆ ಒಳ್ಳೆಯ ಪಾಠವನ್ನು ಹೇಳಿಕೊಡುತ್ತದೆ : ಸಿಇಓ ಶಶಿಧರ ಕುರೇರ




**ಬಾಗಲಕೋಟೆ :** ಎಲ್ಲರೂ ಸಮಾನತೆಯ ಸಮಾಜ ನಿರ್ಮಾಣ ಮಾಡಲು ಮುಂದಾಗಬೇಕು ಎಂದು ಬಾಗಲಕೋಟೆ ಜಿಲ್ಲಾಧಿಕಾರಿ ಜಾನಕಿ ಕೆಎಂ ಹೇಳಿದರು ನವನಗರದಕಲಾಭವನದಲ್ಲಿಶನಿವಾರನಡೆದ ಶ್ರೀಕಾಳಿದಾಸಶಿಕ್ಷಣಸಂಸ್ಥೆಯಶ್ರೀಕಾಳಿದಾಸ ಅಂತರಾಷ್ಟ್ರೀಯ ಪಬ್ಲಿಕ್ ಶಾಲೆ ಹಾಗೂ ಪದವಿ ಪೂರ್ವ ಕಾಲೇಜು ಮತ್ತು ಹೈಸ್ಕೂಲ್ ವಿಭಾಗದ 5ನೇ ವಾರ್ಷಿಕ ಸಮ್ಮೇಳನದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಇಲ್ಲಿ ನೆರೆದಿರುವವರು ಪಾಲಕರು ಶಿಕ್ಷಕರು ವಿದ್ಯಾರ್ಥಿಗಳು ಎಲ್ಲರೂ ಒಂದೇ ಸಮಾಜದವರಲ್ಲ, ಎಲ್ಲರೂ ವಿವಿಧ ಸಮಾಜದವರಾಗಿದ್ದಿರಿ. ಈ ನಿಟ್ಟಿನಲ್ಲಿ ಉನ್ನತ ಶಿಕ್ಷಣ ಪಡೆದುಕೊಂಡು ಸಮಾನತೆಯ ಸಮಾಜ ನಿರ್ಮಾಣ ಮಾಡಲಿಕ್ಕೆ ಹೆಜ್ಜೆ ಹಾಕಿ ಎಂದು ತಿಳಿಸಿದ ಅವರು ಶ್ರೀ ಕಾಳಿದಾಸ ವಿದ್ಯಾಸಂಸ್ಥೆ, ಈ ಕಾರ್ಯಕ್ರಮವನ್ನು ಅತ್ಯಂತ ಅರ್ಥಪೂರ್ಣ ಮತ್ತು ಕಲರ್ಫುಲ್ ಆಗಿ ಅಚ್ಚುಕಟ್ಟಾಗಿ ಆಯೋಜಿಸಿದ್ದು ಕಳೆದ ಐದು ದಶಕಗಳಿಂದ ಒಂದು ಸಣ್ಣ ಕಟ್ಟಡದಲ್ಲಿ ಪ್ರಾರಂಭವಾದಈಸಂಸ್ಥೆಇಂದುವಿಶಾಲವಾದ ಕಟ್ಟಡದೊಂದಿಗೆ ಒಳ್ಳೆಯ ಶಿಕ್ಷಣ ನೀಡುತ್ತಿದ್ದು ಹೆಮ್ಮೆಯವಿಷಯಅದರಂತೆವಿದ್ಯಾರ್ಥಿಗಳು ಸಾಮಾಜಿಕ ಪ್ರಜ್ಞೆ, ಪರಿಸರ ಪ್ರಜ್ಞೆ, ಹಾಗೂ ಸಮಯ ಪ್ರಜ್ಞೆಯನ್ನು ಹೊಂದಿರಬೇಕು ಉತ್ತಮ ಸಮಾಜ ನಿರ್ಮಾಣ ಮಾಡಲು ಶಿಕ್ಷಕರಜೊತೆಪೋಷಕರುಕೈಜೋಡಿಸಿದಾಗ ಮಾತ್ರ ಇದು ಸಾಧ್ಯವಾಗುತ್ತದೆ ಇಷ್ಟು ದೊಡ್ಡ ಶಿಕ್ಷಣಸಂಸ್ಥೆಯಲ್ಲಿವಿದ್ಯಾಭ್ಯಾಸಕೊಡುವುದು ಸುಲಭವಲ್ಲ ನಮ್ಮ ದೇಶಕ್ಕೆ ಬೇಕಾಗಿರುವುದು ಒಳ್ಳೆಯ ಪ್ರಜೆಗಳು ನಾವು ಮಾಡೇ ಮಾಡ್ತೀವಿ ಎನ್ನುವ ಯುವ ಸಮೂಹ ಬೇಕಾಗಿದೆ ಈ ಕೆಲಸವನ್ನು ಚೈತನ್ಯಶೀಲದಿಂದ ಮಾಡಲು ವಿದ್ಯಾರ್ಥಿಗಳಲ್ಲಿ ಸಾಮರ್ಥ್ಯವಿದೆ ಎನ್ನುವ ಮನೋಬಲವನ್ನು ಹೆಚ್ಚಿಸುವುದು ಪ್ರತಿಯೊಬ್ಬ ಶಿಕ್ಷಕರ ಜವಾಬ್ದಾರಿಯಾಗಿದ್ದು ಉತ್ತಮ ಗುರಿಗಳನ್ನು ವಿದ್ಯಾರ್ಥಿಗಳು ಇಟ್ಟುಕೊಂಡುತಮ್ಮದೈನಂದಿನದಿನಾಚರಣೆ ಸಿದ್ಧತೆಯಲ್ಲಿ ಸಾಗಿದಾಗ ಮಾತ್ರ ಸಾಧಿಸಲು ಅನುಕೂಲವಾಗುತ್ತದೆ. ಕೇವಲ ಒಂದು ದಿನ ಎನ್ನದೆ ಇದು ಅನುದಿನದ ಸಿದ್ಧತೆಯಲ್ಲಿ ಇದ್ದಾಗ ಮಾತ್ರ ಫಲ ಸಿಗಲು ಸಾಧ್ಯ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಅತಿಥಿಗಳಾಗಿಭಾಗವಹಿಸಿಮಾತನಾಡಿದಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ್ ಕುರೇರ, ಈ ಸಂಸ್ಥೆ ಕಳೆದ 1970 ರಿಂದ ಇಲ್ಲಿಯವರೆಗೆ 10 ಹಲವಾರು ಯಶಸ್ಸಿನ ಹೆಜ್ಜೆಗಳನ್ನು ಕಂಡು ಹೆಮ್ಮರವಾಗಿ ಬೆಳೆದಿದೆ, ಈ ಸಂಸ್ಥೆಯ ಪದಾಧಿಕಾರಿಗಳು ಪ್ರಾಧ್ಯಾಪಕರು, ಶಿಕ್ಷಕರು, ಉಪನ್ಯಾಸಕರಿಗೆ ಅಭಿನಂದನೆ ಸಲ್ಲಿಸುತ್ತೇನೆ ಶಿಕ್ಷಣ ಸಂಸ್ಥೆ ನಡೆಸಿಕೊಂಡು ಹೋಗುವುದು ಈಯುಗದಲ್ಲಿಅಷ್ಟುಸುಲಭದಕೆಲಸವಲ್ಲಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆ ಒಳ್ಳೆಯ ರೀತಿಯಲ್ಲಿ ಉತ್ತಮ ಶಿಕ್ಷಣ ನೀಡುತ್ತಿದ್ದು ಸಂಸ್ಥೆಯಿಂದ ವಿದ್ಯಾರ್ಥಿಗಳು, ಒಳ್ಳೆ ಒಳ್ಳೆ ಕ್ರೀಡಾಪಟುಗಳು ಸಾಧನೆ ಮಾಡಿದ್ದನ್ನು ನೋಡಿದರೆ ಈ ಸಂಸ್ಥೆಯ ಜವಾಬ್ದಾರಿ ಎಂತದ್ದು ಎಂದು ತಿಳಿಯುತ್ತದೆ.

ಈ ವಿದ್ಯಾರ್ಥಿಗಳಿಗೆಲ್ಲ ಈ ಕಾರ್ಯಕ್ರಮದಲ್ಲಿ ಸನ್ಮಾನಿಸಿದ್ದು ಖುಷಿಕರ ಸಂಗತಿ ಎಂದು ತಿಳಿಸಿದ ಅವರು, ಎಲ್ಲರಿಗೂ ಪ್ರತಿಯೊಂದು ಹಂತಗಳಲ್ಲಿ ನೋವು ಕಷ್ಟಗಳು ಬಂದೇ ಬರುತ್ತವೆಅದನ್ನೇಬದಿಗೊತ್ತಿಒಳ್ಳೆಯಸತ್ಕಾರ ನಡವಳಿಕೆಗಳನ್ನು ಅಳವಡಿಸಿಕೊಂಡು ಮಾತ್ರ ವಿಶೇಷವಾಗಿ ಸಾಧಿಸಲು ಸಾಧ್ಯ. ನಮ್ಮ ಮಕ್ಕಳನ್ನು ಆಸ್ತಿಯನ್ನಾಗಿ ಮಾಡಲು ಅವರಿಗೆಸೂಕ್ತಸೌಲಭ್ಯಗಳನ್ನುಒದಗಿಸಿದಾಗ ಶಿಕ್ಷಣದಲ್ಲಿ ಸಾಧಿಸಲು ಸಾಧ್ಯವಾಗುತ್ತದೆ ಎಂದು ಪಾಲಕರಿಗೆ ತಿಳಿಸಿದರು.

ನೋವುಗಳು ನಮ್ಮ ಜೀವನಕ್ಕೆ ಒಳ್ಳೆಯ ಪಾಠವನ್ನು ಹೇಳಿಕೊಡುತ್ತದೆ ಕಷ್ಟಗಳನ್ನು ಬದಿಗೊತ್ತಿ ಒಳ್ಳೆಯ ಶಿಕ್ಷಣ ಪಡೆಯಿರಿ ಹೆಚ್ಚಿನ ಪ್ರಯತ್ನದಿಂದ ಒಂದು ದಿನ ಪ್ರತಿಫಲ ಸಿಕ್ಕೇ ಸಿಗುತ್ತದೆ. ವಿದ್ಯಾರ್ಥಿಗಳಿಗೆ ದೊಡ್ಡ ಮಟ್ಟದ ಅಧಿಕಾರಿಯಾಗಬೇಕೆಂಬ ಆಸೆ ಇದ್ದರೆ ಅದಕ್ಕೆ ಕಠಿಣ ಪರಿಶ್ರಮ ಮತ್ತು ಗುರಿ ಅಗತ್ಯ, ಪ್ರತಿಯೊಂದು ಮಗುವಿನಲ್ಲಿ ಒಳ್ಳೆಯ ಗುಣ ಮತ್ತು ಕೌಶಲ್ಯ ಅಡಗಿರುತ್ತದೆ ಅವರಲ್ಲಿನ ಪ್ರತಿಭೆಯನ್ನು ಹೊರ ಹಾಕುವ ಮೂಲಕ ಸಾಧನೆಗೆ ಮುಂದಾಗಲಿಕ್ಕೆ ನೆರವಾಗಿ ಎಂದು ನೆರೆದಿದ್ದ ಪಾಲಕರಿಗೆ ತಿಳಿಸಿದರು.ತದನಂತರ ಮಾತನಾಡಿದ ಸಂಸ್ಥೆಯ ನಿರ್ದೇಶಕ ವಿ ಎಂ ಪಾಟೀಲ್ ನಮ್ಮ ಸಂಸ್ಥೆ ಬಡ ಮಕ್ಕಳಿಗೆ ಉತ್ತಮ ರೀತಿಯಲ್ಲಿ ಶಿಕ್ಷಣ ನೀಡುತ್ತಾ, ಕ್ರೀಡೆಯಲ್ಲಿ ರಾಜ್ಯ ರಾಷ್ಟ್ರಮಟ್ಟಕ್ಕೆ ಸಂಸ್ಥೆಯ ವಿದ್ಯಾರ್ಥಿಗಳು ಮಿಂಚುತ್ತಿದ್ದಾರೆ.

## ವಿಜ್ಞಾನ ಮಹಾವಿದ್ಯಾಲಯ ವಿದ್ಯಾರ್ಥಿಗಳಿಂದ ಸಂಕ್ರಾಂತಿ ಸುಗ್ಗಿ ಸಂಭ್ರಮ

### ಬೀಳೂರ ಅಜ್ಜನ ಭಾವಚಿತ್ರ ಮೆರವಣಿಗೆ, ಇಲಕಲ್ ಸಾರಿಯಲ್ಲಿ ಮಿಂಚಿದ ವಿದ್ಯಾರ್ಥಿನಿಯರು



**ಬಾಗಲಕೋಟೆ :** ಬಿ.ವಿ.ವಿ.ಸಂಘದ ಬಸವೇಶ್ವರ ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯ ವಿದ್ಯಾರ್ಥಿಗಳಿಂದ ಸೋಮವಾರ ಸಂಕ್ರಾಂತಿ ಸುಗ್ಗಿ ಸಂಭ್ರಮವನ್ನು ಅದ್ದೂರಿಯಾಗಿ ಆಚರಿಸಿದರು.

ಬೆಳಿಗ್ಗೆ ಬೀಳೂರ ಗುರುಬಸವ ಮಹಾಸ್ವಾಮಿಗಳಿಗೆ ಪೂಜೆ ಸಲ್ಲಿಸಿ, ದೇವಸ್ಥಾನದ ಮುಂಬಾಗದಲ್ಲಿ ಬೀಳೂರ ಅಜ್ಜನ ಭಾವಚಿತ್ರದ ಮೆರವಣಿಗೆಗೆ ಕಾಲೇಜು ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಗುರು ಬಸವ ಸೂಳಿಭಾವಿ ಭಾವಚಿತ್ರಕ್ಕೆ ಪುಷ್ಪಾಂಜಲಿ ಸಲ್ಲಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು ಹಬ್ಬಗಳು ಭಾರತೀಯ ಸಂಸ್ಕೃತಿಯ ಏಕತೆಯ ಪ್ರತಿಕವಾಗಿವೆ, ಭಾರತದ ಸಂಸ್ಕೃತಿ, ಧರ್ಮ ಮತ್ತು ಕೃಷಿಯೊಂದಿಗೆ ಆಳವಾದ ಸಂಬಂದ ಹೊಂದಿರುವ ಹಬ್ಬವಾಗಿದೆ, ವೈವಿದ್ಯಮಯ ಸಮುದಾಯಗಳನ್ನು ಒಂದುಗೂಡಿಸುವ ಹಬ್ಬವಾಗಿದ್ದು, ಸೂರ್ಯನ ಉತ್ತರದ ಪ್ರಯಾಣವನ್ನು ಮಾತ್ರವಲ್ಲದೆ ನವೀಕರಣ, ಸಮೃದ್ಧಿ ಮತ್ತು ಕೌಟುಂಬಿಕ ಬಂಧನಗಳನು ಬಲಪಡಿಸಲು ಈ ಹಬ್ಬಗಳು ನಮಗೆ ಸಹಕಾರಿಯಾಗಿವೆ ಎಂದರು.

ಈ ಸಂಧರ್ಭದಲ್ಲಿ ಸಂಘದ ಆಡಳಿತಾಧಿಕಾರಿ ಡಾ.ವಿಜಯಕುಮಾರ ಕಟಗಿಹಳ್ಳಿಮಠ, ಪದನಿಮಿತ್ಯ ಕಾರ್ಯದರ್ಶಿಗಳಾದ ಡಾ.ಎಸ್.ಎಂ.ಗಾಂವಕರ, ಮಹಾವಿದ್ಯಾಲಯ ಪ್ರಾಚಾರ್ಯ ಡಾ.ಎನ್. ಹೆಚ್.ಬೇವಿನಹಳ್ಳಿ ಇದ್ದರು.

**ಸಂಕ್ರಾಂತಿ ಸ್ಪೇಶಲ್ :**

ಉತ್ತರ ಕರ್ನಾಟಕದ ಸಾಂಪ್ರದಾಯಿಕ ಇಳಕಲ್ ಸೀರೆ ಉಟ್ಟು ತಲೆಗೆ ಪೇಟಾ ಧರಿಸಿ ಉಪನ್ಯಾಸಕರ ಹಾಗೂ ವಿದ್ಯಾರ್ಥಿಗಳು ಜನಪದ ನೃತ್ಯಕ್ಕೆ ಹೆಜ್ಜೆ ಹಾಕಿ ವಿದ್ಯಾರ್ಥಿಗಳ ವೈಭವ ನೋಡುಗರನ್ನು ರಂಜಿಸಿತು, ಹೊಸವರ್ಷದಆರಂಭದಲ್ಲಿಮೊದಲರೈತರಹಬ್ಬವೇ ಈ ಸಂಕ್ರಾಂತಿ. ಇಂಥ ಸಂಕ್ರಾಂತಿ ಸುಖಿ ಸಂಕ್ರಮಕ್ಕೆ ಸಾಕ್ಷಿಯಾಗಿದ್ದು ಬಿ.ವಿ.ವಿ.ಸಂಘ ಸಂಘದ ಬಸವೇಶ್ವರ ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯ, ಜನಪದ ಹಾಡುಗಳಿಗೆ ವಿದ್ಯಾರ್ಥಿಗಳು ಹೆಜ್ಜೆ ಹಾಕಿ ಸಂಭ್ರಮಿಸಿದರು. ರಂಗೋಲಿ ಹಾಕಿ ಕಾಲೇಜಿಗೆ ಮೇರವ ನೀಡಿದ್ದು ಸುಗ್ಗಿಯ ನಿಜವಾದ ಆನಂದ ದಿನಾಲು ಕಾಲೇಜು ಕ್ಲಾಸ್ ಅಂತಿದ್ದ ವಿದ್ಯಾರ್ಥಿಗಳಿಗೆ ಸಂಕ್ರಾಂತಿ ಸಂಭ್ರಮ ವಿಭಿನ್ನ ಅನುಭವ ನೀಡಿದ್ದು ಕಲರ್ ಕಲರ್ ಸೀರೆಯಲ್ಲಿ ಗ್ವಾಗಲ್ ಹಾಕಿ ಪೋಜು ನೀಡಿದರೆ, ವಿದ್ಯಾರ್ಥಿಗಳು ದೇಸಿ ಪಂಚೆಯಲ್ಲಿ ಮಿಂಚಿದರು. ಒಟ್ಟಿನಲ್ಲಿ ಕಾಲೇಜಿನಲ್ಲಿ ಸಂಕ್ರಾಂತಿ ಸುಗ್ಗಿ ಸಂಭ್ರಮ ಮನೆ ಮಾಡಿತ್ತು.

# ಅದಿತಿ ಖಂಡೇಗಲ್ ಗಾಯನಕ್ಕೆ ತಲೆದೂಗಿದ ಬಳಗದ ಸದಸ್ಯರು





**ಬಾಗಲಕೋಟ :** ಮಂಗಳವಾರ ದಿನಾಂಕ 14.01.2025 ರಂದು ನೀರಲಕೇರಿಯ ಡಾ. ಹೆಚ್.ಎಫ್. ಯೋಗಪ್ಪನವರ ಅದೃಷ್ಟವನ ತೋಟದಲ್ಲಿ, ನಗರದ ಸಾಮಾಜಿಕ-ಧಾರ್ಮಿಕ-ಸಾಂಸ್ಕೃತಿಕ ಸೇವಾ ಸಂಸ್ಥೆ ಗೆಳೆಯರ ಬಳಗ ಸಂಗೀತ ಸಂಕ್ರಾಂತಿ ಕಾಯಕ್ರಮ ಆಯೋಜಿಸಿದ್ದರು.

ರಾಷ್ಟ್ರಮಟ್ಟದ ಹಿನ್ನೆಲೆ ಗಾಯಕಿ, ಝೀ ಟಿ.ವಿ ವಾಹಿನಿಯ ಪ್ರಶಸ್ತಿ ಪುರಸ್ಕೃತ ಹಾಗೂ ಕನ್ನಡ-ಹಿಂದಿ-ಮರಾಠಿ ಚಲನಚಿತ್ರ ಗೀತೆಗಳಿಗೆ ಧ್ವನಿಯಾದ ಅದಿತಿ ಖಂಡೇಗಲ್ 2-00 ಗಂಟೆಗಳ ಕಾಲ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಭಕ್ತಿ ಗೀತೆಗಳಾದ ಪ್ರಣತಿ ಇದೆ ಬತ್ತಿ ಇದೆ, ಗುರುವಿಗೆ ತನುವನ್ನು, ಕಮಲೆ ಕಮಲಾಲಯ, ನಿನ್ಯಾಕೋ ನಿನ್ನ ಹಂಗ್ಯಾಕೋ, ಕ್ಲಾಸಿಕಲ್ ನಲ್ಲಿ ನಾಟ್ಯ ಸಂಗೀತಾ, ಹಿಂದಿ ಗಜರ ಜೈ ಜೈ ರಾಮ, ಚಲನಚಿತ್ರ ಗೀತೆಗಳಾದ ಬಾನಲ್ಲೂ ನೀನೇ, ಸಂಕ್ರಾಂತಿ ರುತೋ ರುತೋ, ಸತ್ಯಂ ಶಿವಂ ಸುಂದರಂ, ಪಾಯೋಜಿ ಮೈನೆ ರಾಮ ರತನ ಧನ ಪಾಯೋ ಮುಂತಾದ ಹಾಡುಗಳನ್ನು ಹಾಡಿ ಬಳಗದ ಸದಸ್ಯರನ್ನು ಮಂತ್ರ ಮುಗ್ಧರನ್ನಾಗಿಸಿದರು. ಸಂಗೀತದ ಸವಿಭೋಜನ ಬಡಿಸಿದರು.

ನಂತರ ಗೆಳೆಯರ ಬಳಗದ ಸದಸ್ಯರು, ಪರಿವಾರ ಸರ್ವ ಸದಸ್ಯರು, ಗಣ್ಯ ವ್ಯಕ್ತಿಗಳು ಸಂಕ್ರಾಂತಿಯ ಸವಿಭೋಜನ ಮಾಡಿದರು. ಸೇಂಗಾ-ಎಳ್ಳು ಹೋಳಿಗೆ, ಹುಗ್ಗಿ, ಬೆಣ್ಣೆ, ತುಪ್ಪ, ಕಡಕ ಜೋಳದ ಹಾಗೂ ಸಜ್ಜಿ ರೊಟ್ಟಿ, ಕೆನೆ ಮೊಸರು, ಸೇಂಗಾ-ಅಗಸಿ-ಗುರೆಳ್ಳು ಚಟ್ನಿಪುಡಿ, ತುಂಬ ಬದ್ನೆಕಾಯಿ, ಕಾಳು ಪಲ್ಲೆ, ಮಿರ್ಚಿ ಬಜಿ, ಪಚಡಿ, ಸಾದಾ ಅನ್ನ-ಫಲಾವ-ಮೊಸರನ್ನ ಮುಂತಾದ ಅಹಾರ ಪದಾರ್ಥಗಳನ್ನು ಸ್ವಯಂ ಪರಿವಾರದ ಸದಸ್ಯರು ಮನೆಯಿಂದ ಮಾಡಿ ತಂದಿದ್ದು ವಿಶೇಷವಾಗಿತ್ತು.

ಸಂಕ್ರಾಂತಿ ಸಂಭ್ರಮದ ಈ ಕಾರ್ಯಕ್ರಮದಲ್ಲಿ ಬಳಗದ ಅಧ್ಯಕ್ಷ ಮಹಾಬಳೇಶ್ವರ ಗುಡಗುಂಟಿ ಪರಿಚಯಿಸಿ ಸ್ವಾಗತಿಸಿದರು. ಕಾರ್ಯಕ್ರಮವನ್ನು ವಿನೋದ ಯಡಹಳ್ಳಿ ನಿರೂಪಿಸಿದರು. ಜಯಪ್ರಕಾಶ ಬೆಂಡಿಗೇರಿ ವಂದಿಸಿದರು. ಇದೇ ಸಂದರ್ಬದಲ್ಲಿ ಬಾಗಲಕೋಟ ಅರ್ಬನ್ ಬ್ಯಾಂಕಿಗೆ ನಿರ್ದೇಶಕರಾಗಿ ಆಯ್ಕೆಯಾದ ಬಳಗದ ಸದಸ್ಯ ಡಾ. ಪ್ರಹ್ಲಾದ ಹುಯಿಲಗೋಳ, ಬಸವೇಶ್ವರ ಸಹಕಾರಿ ಬ್ಯಾಂಕಿಗೆ ನಿರ್ದೇಶಕಿಯಾಗಿ ಆಯ್ಕೆಗೊಂಡ ಶ್ರೀಮತಿ ಶೈಲಜಾ ಮ. ಗುಡಗುಂಟಿ ಹಾಗೂ ಸಂಗೀತ ಕಾರ್ಯಮ ನಡೆಸಿಕೊಟ್ಟ ಅದಿತಿ ಖಂಡೇಗಲ್ ಇವರಿಗೆ ಸನ್ಮಾನಿಸಿ ಗೌರವಿಸಲಾಯಿತು. ಸಂಗೀತ ಸಂಕ್ರಾಂತಿ ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಎಸ್ ಎಸ್ ಗದ್ದಿ, ಕೋಶಾದ್ಯಕ್ಷ ಜಿ ಎಸ್ ಬುರ್ಲಿ, ಬಸವರಾಜ ಭಗವತಿ, ಡಾ. ಬಿ ಎಚ್ ಕೆರೂಡಿ, ಡಾ. ಆರ್ ಟಿ ಪಾಟೀಲ, ಡಾ. ಎಮ್ ಎಸ್ ದಡ್ಡೆನ್ನವರ, ಡಾ. ವ್ಹಿ ಆರ್ ಸೋರಗಾಂವಿ, ಡಾ. ಭಾವಿ, ಡಾ. ಪ್ರಭುಸ್ವಾಮಿ ಮಠ, ಡಾ. ಹೆಚ್ ಎಫ್ ಯೋಗಪ್ಪನವರ, ಡಾ. ಬಿ ಎಸ್ ಮರೆಗುದ್ದಿ, ಜಿ ಎನ್ ಪಾಟೀಲ, ಎಮ್ ಎನ್ ಪುರಾಣಿಕಮಠ, ಆರ್ ಎಸ್ ದಂಡಣ್ಣವರ, ಎಮ್ ಎಸ್ ಹಂಡಿ ವಕೀಲರು, ಪಾವಟೆ ಗುರುಗಳು, ನಗರಸಭೆ ಅಧ್ಯಕ್ಷ ಶ್ರೀಮತಿ ಸವಿತಾ ಲೆಂಕೆನ್ನವರ, ಗೆಳೆಯರ ಬಳಗದ ಸರ್ವ ಸದಸ್ಯರು ಸಂಕ್ರಾಂತಿ ಸಂಭ್ರಮದಲ್ಲಿ ಪಾಲ್ಗೊಂಡು ಪ್ರೀತಿಯಿಂದ ಎಳ್ಳು-ಬೆಲ್ಲವನ್ನು ವಿನಿಮಯ ಮಾಡಿಕೊಂಡರು.

# ಭೂದಾಖಲೆ ರೈತರಿಗೆ ಶೀಘ್ರ ಒದಗಿಸಲು ಗಣಕೀಕರಣ



**ಬಸವನ ಬಾಗೇವಾಡಿ :** ಕಂದಾಯ ಇಲಾಖೆಯ ಭೂ ದಾಖಲೆಗಳನ್ನು ಸುರಕ್ಷಿತವಾಗಿ ಹಾಗೂ ರೈತರಿಗೆ ಶೀಘ್ರವಾಗಿ ಒದಗಿಸುವ ಉದ್ದೇಶದಿಂದ ಗಣಿಕೀಕರಣ ಮಾಡಲಾಗಿದೆ ಹೀಗಾಗಿ ಗಣಿಕೀಕರಣ ಸಮರ್ಪಕವಾಗಲಿ ಎಂದು ಸಚಿವ ಶಿವಾನಂದ್ ಪಾಟೀಲ್ ಹೇಳಿದರು

ಪಟ್ಟಣದ ತಹಶೀಲ್ದಾರ್ ಕಾರ್ಯಾಲಯದಲ್ಲಿ ಭೂ ಸುರಕ್ಷತಾ ಯೋಜನೆ ಅಡಿಯಲ್ಲಿ ಕಂದಾಯ ಇಲಾಖೆಯ ಭೂ ದಾಖಲೆಗಳನ್ನು ಗಣಿಕೀಕರಣ ಕೊಠಡಿ ಉದ್ಘಾಟಿಸಿ ಅವರು ಮಾತನಾಡಿದರು ಗುಣಮಟ್ಟದ ಸೇವೆಗಳು ಮತ್ತು ಸಾರ್ವಜನಿಕರಿಗೆ ಸುಲಭವಾಗಿ ಮಾಹಿತಿ ಮತ್ತು ಭೂ ದಾಖಲೆಗಳು ಶೀಘ್ರದಲ್ಲಿ ಒದಗಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕೆಲಸ ಮಾಡಬೇಕು ಶಿಥಿಲಗೊಂಡ ದಾಖಲೆಗಳನ್ನು ಶಾಶ್ವತವಾಗಿ ಡಿಜಿಟಲ್ ಡಿಜಿಟಲ್ ರೂಪದಲ್ಲಿ ಉಳಿಸಿಕೊಳ್ಳಲು ನಕಲಿ ದಾಖಲೆಗಳ ಹಾವಳಿ ತಪ್ಪಿಸಲು ಸಾರ್ವಜನಿಕರಿಗೆ ಅನಗತ್ಯ ಅಲೆದಾಟ ತಪ್ಪಿಸಲು ಅಂತ ಮೂಲ ದಾಖಲೆಗಳು ಸಾರ್ವಜನಿಕರಿಗೆ ಆನ್ಲೈನ್ ಮೂಲಕ ದೊರೆಯುವಂತೆ ಮಾಡಲು ಸರ್ಕಾರ ಭೂ ಸುರಕ್ಷತಾ ಯೋಜನೆ ಜಾರಿಗೆ ತಂದಿದೆ ಭೂ ದಾಖಲೆಗಳ ಗಣಕೀಕರಣದಿಂದ ಜನಸಾಮಾನ್ಯರು ಸಕಾಲದಲ್ಲಿ ತಮ್ಮ ದಾಖಲಾತಿ ಪಡೆದು ಕಚೇರಿಗಳಿಗೆ ಅಲೆದಾಡುವುದು ತಪ್ಪಿಸಲು ಕಂದಾಯ ಇಲಾಖೆ ಈ ಯೋಜನೆ ಮಹತ್ವದ್ದಾಗಿದೆ ಭೂ ದಾಖಲೆಯಾಗಿ ಬರುವ ಜನರು ಕಷ್ಟ ಪರಿಹರಿಸಲು ಕಂದಾಯ ಇಲಾಖೆಯ ಅಧಿಕಾರಿಗಳು ಕೈ ಜೋಡಿಸಬೇಕು ಎಂದು ಹೇಳಿದರು ಈ ಸಂದರ್ಭದಲ್ಲಿ ಕೋಲಾರ್ ಬಾಗೇವಾಡಿ ತಾಲೂಕಿನ ತಹಸಿಲ್ದಾರರು ಮತ್ತು ಕಂದಾಯ ಇಲಾಖೆಯ ಉಪ ವಿಭಾಗ ಅಧಿಕಾರಿಗಳು ಹಾಗೂ ಸಹಕಾರ ಮಹಾಮಂಡಳದ ನಿರ್ದೇಶಕರಾದ ಈರಣ್ಣ ಪಟ್ಟಣಶೆಟ್ಟಿ ಶಂಕರ್ ಗೌಡ ಬಿರಾದಾರ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ್ ಹಾರಿವಾಳ ಕಂದಾಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾಂಗ್ರೆಸ್ ಕಾರ್ಯಕರ್ತರು ಈ ಸಂದರ್ಭದಲ್ಲಿ ಹಾಜರಿದ್ದರು.

# ಪಿಂಚಣಿ ಪರಿಷ್ಕರಣೆಗಾಗಿ ಬ್ಯಾಂಕ್ ನಿವೃತ್ತ ನೌಕರರ ಧರಣಿ



**ವಿಜಯಪುರ :** ಕಳೆದ 30 ವರ್ಷಗಳಿಂದ ನಿವೃತ್ತಬ್ಯಾಂಕ್‌ನೌಕರರಪಿಂಚಣಿಪರಿಷ್ಕರಣೆ ಆಗಿಲ್ಲ, ಬ್ಯಾಂಕುಗಳ ಆಡಳಿತ ಮಂಡಳಿ, ಕೇಂದ್ರ ಸರಕಾರದ ಆರ್ಥಿಕ ಇಲಾಖೆಗೆ ಹಲವಾರು ಬಾರಿ ಬೇಡಿಕೆಯಿಟ್ಟರೂ ನಮ್ಮ ಬೇಡಿಕೆಗಳಿಗೆ ಸ್ಪಂದನೆ ಸಿಗುತ್ತಿಲ್ಲ, ಕೂಡಲೇ ಪಿಂಚಣಿ ಪರಿಷ್ಕರಿಸಿ, ನಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ಅಖಿಲ ಭಾರತ ಬ್ಯಾಂಕ್ ನಿವೃತ್ತ ನೌಕರರ ಒಕ್ಕೂಟದ ಜಿಲ್ಲಾ ಘಟಕದಿಂದ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ, ಜಿಲ್ಲಾಧಿಕಾರಿಗಳ ಮೂಲಕ ಕೇಂದ್ರ ಹಣಕಾಸು ಸಚಿವರಿಗೆ ಶುಕ್ರವಾರ ಮನವಿ ಸಲ್ಲಿಸಲಾಯಿತು.

ಈ ವೇಳೆ ಅಖಿಲ ಭಾರತ ಬ್ಯಾಂಕ್ ನಿವೃತ್ತ ನೌಕರರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವಿಶ್ವನಾಥ ನಾಯಕ ಮಾತನಾಡಿ, ಕೇಂದ್ರ ಸರಕಾರದ ಪಿಂಚಣಿದಾರರಿಗೆ ಇರುವ ಹಾಗೆ ಎಲ್ಲಾ ಬ್ಯಾಂಕ್ ನಿವೃತ್ತರಿಗೂ ಪಿಂಚಣಿ ಪರಿಷ್ಕರಣೆಗಾಗಿ ದೇಶದ ಎಲ್ಲಾ ಬ್ಯಾಂಕ್ ನಿವೃತ್ತ ಸಿಬ್ಬಂದಿಗಳ ಸಂಘಟನೆಗಳು ಕಳೆದ 3 ದಶಕಗಳಿಂದ ಕೇಂದ್ರ ಸರಕಾರಕ್ಕೆ, ಬ್ಯಾಂಕ್ ಆಡಳಿತ ಮಂಡಳಿಗಳಿಗೆ, ಇಂಡಿಯನ್ ಬ್ಯಾಂಕರ್ ಅಸೋಸಿಯೇಷನಗೆ , ಆರ್.ಬಿ.ಐಗೆ ಮನವಿ ಸಲ್ಲಿಸುತ್ತಾ ಬಂದಿದೆ. ಆದರೆ ಪಿಂಚಣಿ ಪರಿಷ್ಕರಣೆ ಮಾಡದೆ, ಇವರೆಲ್ಲ ವಯೋವೃದ್ಧ ಬ್ಯಾಂಕು ನಿವೃತ್ತದಾರರನ್ನುಶೋಷಣೆಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ದೇಶದ ಪ್ರಗತಿಗೆ ಕಾರಣಿಭೂತವಾದ ಸುಭದ್ರ ಬ್ಯಾಂಕ್ ವ್ಯವಸ್ಥೆಯನ್ನು ಕಟ್ಟಿ ಬೆಳಸಿದ ಈ ಹಿರಿಯರ ನೋವನ್ನು ಅರಿತು ಕೇಂದ್ರ ಸರ್ಕಾರ ಕೂಡಲೇ ನಮ್ಮ ವೇತನ ಪರಿಷ್ಕರಣೆ ಹಾಗೂ ಇತರ ಬೇಡಿಕೆಗಳನ್ನು ಈಡೇರಿಸಬೇಕು.

ಒಂದು ವೇಳೆ ಹಣಕಾಸು ಮಂತ್ರಾಲಯ ಮತ್ತುಆಡಳಿತಮಂಡಳಿಗಳುಸ್ಪಂದಿಸದಿದ್ದರೆ ನಿರಂತರ ಹೋರಾಟ ಮಾಡಲು ನಾವೆಲ್ಲ 8 ಲಕ್ಷ ನಿವೃತ್ತ ನೌಕರರು ಕಟಿಬದ್ಧರಾಗಿದ್ದೇವೆ. ಇದಕ್ಕೆ ಬ್ಯಾಂಕ್ ಸಂಘಟನೆಗಳ ಜಂಟಿ ಒಕ್ಕೂಟ ನಿರ್ಧರಿಸಿದೆ ಎಂದರು.

ಅಖಿಲ ಭಾರತ ಬ್ಯಾಂಕ್ ನಿವೃತ್ತರ ಒಕ್ಕೂಟದ ಜಂಟಿ ಕಾರ್ಯದರ್ಶಿ ಎಂ. ಎಸ್. ಭಟ್ ಮಾತನಾಡಿ, ನಮ್ಮ ನ್ಯಾಯಯುತ ಬೇಡಿಕೆಗಳಿಗಾಗಿಜೀವನದ ಇಳಿವಯಸ್ಸಿನಲ್ಲಿ ಹೋರಾಟ ಮಾಡಬೇಕಾಗಿ ಬಂದದ್ದು ಖೇದಕರ. ಎಲ್ಲ ರಾಜ್ಯಗಳಲ್ಲೂ ಎಲ್ಲ ಜಿಲ್ಲೆಗಳಲ್ಲೂ ಈ ಹೋರಾಟ ವ್ಯಾಪಿಸುತ್ತದೆ. ಸರಕಾರ ಕಣ್ಣು ತೆರೆದು ನಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿದರು.

ಈ ವೇಳೆ ಅಖಿಲ ಭಾರತ ಬ್ಯಾಂಕ್ ನಿವೃತ್ತ ನೌಕರರ ಒಕ್ಕೂಟದ ಜಿಲ್ಲಾಧ್ಯಕ್ಷ ವಿಠಲ್ ಕಾಳೆ, ಪ್ರಧಾನ ಕಾರ್ಯದರ್ಶಿ ಅಶೋಕ್ ಉಪಾಧ್ಯಾಯ ಮಾತನಾಡಿ, ಎಲ್ಲ ಬೇಡಿಕೆಗಳು ಈಡೇರುವವರೆಗೂ ಹೋರಾಟಕ್ಕೆ ನಾವೆಲ್ಲ ಸಿದ್ದರಾಗಲು ಕರೆ ಕೊಟ್ಟರು.

ಅಖಿಲ ಭಾರತ ಸಿಂಡಿಕೇಟ್ ಬ್ಯಾಂಕ್ ನಿವೃತ್ತ ಸಂಘದ ಉಪ ಪ್ರಧಾನ ಕಾರ್ಯದರ್ಶಿ ಅಜಯಕುಮಾರ ಹಾಗೂ ಅಖಿಲ ಭಾರತ ಕೆನರಾ ಬ್ಯಾಂಕ್ ಕ್ಷೇತ್ರಿಯ ಕಾರ್ಯದರ್ಶಿ ಮುನಿಕೃಷ್ಣಪ್ಪ, ಮಹಾರಾಷ್ಟ್ರ ಬ್ಯಾಂಕ್ ನಿವೃತ್ತ ನೌಕರರ ಒಕ್ಕೂಟದ ಅಧ್ಯಕ್ಷ ಸುಭಾಷ್ ದೇಶಪಾಂಡೆ, ಅಖಿಲ ಭಾರತ ಸಿಂಡಿಕೇಟ್ ಬ್ಯಾಂಕ್ ನಿವೃತ್ತ ನೌಕರರ ಒಕ್ಕೂಟದ ರಾಜ್ಯ ಕಾರ್ಯದರ್ಶಿ ಕೆ. ಮಣಿ ಮುಂತಾದವರು ಭಾಗವಹಿಸಿ ಮಾತನಾಡಿದರು. ಈ ಧರಣಿ ಸತ್ಯಾಗ್ರಹದಲ್ಲಿ ಅಖಿಲ ಭಾರತ ಬ್ಯಾಂಕ್ ನಿವೃತ್ತ ನೌಕರರ ಒಕ್ಕೂಟದ ಸಂಘಟನಾ ಕಾರ್ಯದರ್ಶಿ ಮಹಾದೇವ ಹಾಲಳ್ಳಿ, ಉಪಾಧ್ಯಕ್ಷ ಚಂದ್ರಶೇಖರ ಘಂಟೆಪ್ಪಗೋಳ, ಜಗದೀಶ ಮೋಟಗಿ, ಪಿ.ಎಸ್. ಪುರಾಣಿಕ, ವಿ.ಆರ್. ಕುಲಕರ್ಣಿ, ಈರಣ್ಣ ಚಿಮ್ಮಲಗಿ, ಎಸ್.ಎ. ಕುಲಕರ್ಣಿ ಹಾಗೂ ಎಲ್ಲಾ ಬ್ಯಾಂಕುಗಳ ನಿವೃತ್ತ ನೌಕರ ನೇತಾರರು ಭಾಗವಹಿಸಿದ್ದರು. ಈ ಹೋರಾಟದಲ್ಲಿ ವಿಜಯಪುರ, ಬಾಗಲಕೋಟೆ, ಕಲಬುರಗಿ, ಬೆಳಗಾವಿ ಜಿಲ್ಲೆಗಳ ಸುಮಾರು 250 ನಿವೃತ್ತರು ಭಾಗವಹಿಸಿದ್ದರು.

# ಜಗತ್ತಿಗೆ ಆಶ್ರಯವನ್ನು ಕೊಟ್ಟ ಜಗದ್ಗುರು ಭಾರತ: ರಾಜೇಶ್ ಬಿರಾದಾರ



**ಬಾಗಲಕೋಟೆ :** ನಗರದ ಬಿವಿವಿ ಸಂಘದ ನೂತನ ಸಭಾಭವನದಲ್ಲಿ ರವಿವಾರ ಬಸವೇಶ್ವರ ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯದ 2024 25ನೇ ಶೈಕ್ಷಣಿಕ ಸಾಲಿನ ಕ್ರೀಡಾ ಹಾಗೂ ಸಾಂಸ್ಕೃತಿ-ಕ ಚಟುವಟಿಕೆಗಳ ಸಮಾರೋಪ ಸಮಾರಂಭ ನಡೆಯಿತು. ಈ ಕಾರ್ಯಕ್ರಮದಲ್ಲಿ ಮಾತನಾಡಿದ ಬಾಗಲಕೋಟೆ ಪರಿತ್ರಾಯಣ ಐಎಎಸ್ ಅಕಾಡೆಮಿ ಸಂಸ್ಥಾಪಕ ರಾಜೇಶ ಬಿರಾದಾರ, ದೇಶ ನಿರ್ಮಾಣ ಆಗಬೇಕೆಂದರೆ ಮೊದಲು ವ್ಯಕ್ತಿತ್ವ ನಿರ್ಮಾಣ ಆಗಬೇಕು. ಭಾರತ ದೇಶದ ಸಂಸ್ಕೃತಿ, ಪರಂಪರೆಗೆ ಭವ್ಯ ಇತಿಹಾಸವಿದೆ ಎಂದರು. ಸಮಾಜದಲ್ಲಿ ಜ್ಞಾನಕ್ಕಿಂತ ಹೆಚ್ಚಿನದು ಯಾವುದು ಇಲ್ಲ ಅದನ್ನು ಪಡೆಯುವಲ್ಲಿ ನಮ್ಮ ಪ್ರಯತ್ನ ಇರಬೇಕು. ಪ್ರಯತ್ನ ಮುಖ್ಯ ಒಂದು ಗುರಿ ಇಟ್ಟು ಅದನ್ನು ಈಡೇರಿಸುವಲ್ಲಿ ನಮ್ಮ ಪ್ರಯತ್ನ ಇರಬೇಕು ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಕಾಲೇಜುಗಳ ಆಡಳಿತ ಮಂಡಳಿ ಬಿ.ವ್ಹಿ.ವ್ಹಿ.ಸಂಘದ ಪದನಿಮಿತ್ಯಕಾರ್ಯದರ್ಶಿಗಳಾದ ಡಾ. ಎಸ್ ಎಂ ಗಾಂವಕರ, ಪದವಿ ವಿಭಾಗದ ಪ್ರಾಚಾರ್ಯರಾದ ಶ್ರೀಮತಿ ಎಸ್.ಆರ್.ಸಬರದ, ವಿದ್ಯಾರ್ಥಿ ಕಲ್ಯಾಣಾಧಿಕಾರಿ ಡಾ.ಆರ್. ಗಿರೀಶ್, ಸಾಂಸ್ಕೃತಿಕ ವಿಭಾಗದ ಕಾರ್ಯಧ್ಯಕ್ಷ ಶ್ರೀಮತಿ ಪಿ. ಬಿ.ಕಟ್ಟಿಮನಿ, ದೈಹಿಕ ನಿರ್ದೇಶಕರಾದ ಎಸ್. ಎನ್. ಮಂಕಣಿ , ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಎನ್ ಎಚ್ ಬೇವಿನಹಳ್ಳಿ ,ಶ್ರೀಮತಿ ಜಿ.ಎಚ್ ಜಗಳೂರು , ಸುಭಾಷ್ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

# ಗ್ರಾಮೀಣ ಭಾಗಕ್ಕೆ ಬಿಎಲ್‌ಡಿಇ ಆಸ್ಪತ್ರೆ ಸೇವೆ ಶ್ಲಾಘನೀಯ: ಸುಭಾಸಗೌಡ



**ವಿಜಯಪುರ :** ಗ್ರಾಮೀಣ ಭಾಗದಲ್ಲಿ ಜನರ ಬಳಿಗೆ ಆರೋಗ್ಯ ಸೇವೆಯನ್ನು ಒದಗಿಸುತ್ತಿರುವ ಬಿ.ಎಲ್.ಡಿ.ಇ ಆಸ್ಪತ್ರೆಯ ಕಾರ್ಯ ಶ್ಲಾಘನೀಯವಾಗಿದೆ ಎಂದು ಬಿಜ್ಜರಗಿ ಗ್ರಾ. ಪಂ. ಮಾಜಿ ಅಧ್ಯಕ್ಷ ಸುಭಾಸಗೌಡ ಪಾಟೀಲ ಹೇಳಿದ್ದಾರೆ.

ಬುಧವಾರ ತಿಕೋಟಾ ತಾಲೂಕಿನ ಬಿಜ್ಜರಗಿಯಲ್ಲಿ ಬಿ.ಎಲ್.ಡಿ.ಇ ಸೂಪರ್ ಸ್ಪೇ?ಾಲಿಟಿ ಆಸ್ಪತ್ರೆ ವತಿಯಿಂದ ಪ್ರಾಥಮಿಕ ಆರೋಗ್ಯ ಉಪಕೇಂದ್ರ ಹಾಗೂ ಗ್ರಾಮ ಪಂಚಾಯತಿ ಸಹಯೋಗದಲ್ಲಿ ಸರಕಾರಿ ಕನ್ನಡ ಹೆಣ್ಣು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಉಚಿತ ಆರೋಗ್ಯ ತಪಾಸಣೆ ಶಿಬಿರದಲ್ಲಿ ಅವರು ಮಾತನಾಡಿದರು.

ಬಿ.ಎಲ್.ಡಿ.ಇಸಂಸ್ಥೆಯಅಧ್ಯಕ್ಷಮತ್ತುಸಚಿವ ಎಂ.ಬಿ. ಪಾಟೀಲ ಅವರ ಜನರ ಆರೋಗ್ಯ ಪರ ಕಾಳಜಿಯಿಂದಾಗಿ ತಜ್ಞ ವೈದ್ಯರು ಗ್ರಾಮೀಣ ಭಾಗಕ್ಕೆ ಬಂದು ಉಚಿತವಾಗಿ ಆರೋಗ್ಯ ತಪಾಸಣೆ ಮಾಡುತ್ತಿದ್ದಾರೆ. ಈ ಮೂಲಕ ಬಡ ಜನರಿಗೂ ಆರೋಗ್ಯ ಸೇವೆ ಸಿಗುವಂತಾಗಿದೆ ಎಂದು ಅವರು ಹೇಳಿದರು.

ಸಾಮಾಜಿಕ ಕಾರ್ಯಕರ್ತ ಪ್ರೀತು ದಶವಂತ ಪ್ರಾಸ್ತಾವಿಕವಾಗಿ ಮಾತನಾಡಿದರು.

ಆಸ್ಪತ್ರೆಯ ಆಡಳಿತಾಧಿಕಾರಿ ಶಾಂತೇಶ ಸಲಗರೆ ಮಾತನಾಡಿ, ಬಿ.ಎಲ್.ಡಿ.ಇ ಸಂಸ್ಥೆಯ ಶ್ರೀ ಬಿ. ಎಂ. ಪಾಟೀಲ ಸೂಪರ್ ಸ್ಪೇ?ಾಲಿಟಿ ಆಸ್ಪತ್ರೆ ಸುಸಜ್ಜಿತ ಮತ್ತು ಅತ್ಯಾಧುನಿಕ ವೈದ್ಯಕೀಯ ಸೇವೆ ನೀಡುತ್ತಿದ್ದು, ಆರೋಗ್ಯಕ್ಕೆ ಸಂಬಂಧಿಸಿದಂತೆ ಎಲ್ಲ ಯಂತ್ರೋಪಕರಣಗಳನ್ನು ಹೊಂದಿದೆ. ಅಲ್ಲದೇ, ತಜ್ಞ ವೈದ್ಯರು ಮತ್ತು ನುರಿತ ಸುಶ್ರೂಷಕ ಸಿಬ್ಬಂದಿ ಸದಾ ಸೇವಾನಿರತರಾಗಿರುತ್ತಾರೆ. ಹೃದಯ ಮತ್ತು ಕಿಡ್ನಿ ಹಾಗೂ ಕಾರ್ನಿಯಾ ಸಂಬಂಧಿ ಶಸ್ತ್ರಚಿಕಿತ್ಸೆಗಳನ್ನೂ ಆಸ್ಪತ್ರೆಯಲ್ಲಿ ಮಾಡಲಾಗುತ್ತಿದೆ. ಈ ಮೂಲಕ ಎಂ. ಬಿ. ಪಾಟೀಲರ ಆಶಯದಂತೆ ಈ ಭಾಗದ ಜನರಿಗೆ ಆಸ್ಪತ್ರೆ ವರದಾನವಾಗಿದೆ ಎಂದು ಹೇಳಿದರು.

ಈ ಶಿಬಿರದಲ್ಲಿ 35 ಜನರಿಗೆ ಹೃದ್ರೋಗ, 30 ಜನರಿಗೆ ಮೂತ್ರಜನಕಾಂಗ, 35 ಜನರಿಗೆ ನರರೋಗ, 463 ಚಿಕ್ಕಮಕ್ಕಳಿಗೆ, 63 ಜನರಿಗೆ ವೈದ್ಯಕೀಯ ತಪಾಸಣೆ ನಡೆಸಲಾಯಿತು. ಅಲ್ಲದೇ, 70ಕ್ಕೂ ಹೆಚ್ಚು ಜನರಿಗೆ ಹೆಚ್ಚಿನ ಚಿಕಿತ್ಸೆಗಾಗಿ ವಿಜಯಪುರದ ಬಿ.ಎಲ್.ಡಿ.ಇ ಆಸ್ಪತ್ರೆಗೆ ಶಿಫಾರಸು ಮಾಡಲಾಯಿತು.

ಈ ಸಂದರ್ಭದಲ್ಲಿ ಗ್ರಾ. ಪಂ. ಅಧ್ಯಕ್ಷೆ ಲಕ್ಷ್ಮಿಬಾಯಿ ಖ್ಯಾತನ, ಉಪಾಧ್ಯಕ್ಷೆ ಲಕ್ಕವ್ವ ಧನಗೊಂಡ, ವೈದ್ಯಾಧಿಕಾರಿಗಳಾದ ಡಾ. ಅಶೋಕ ಪಟ್ಟಣಶೆಟ್ಟಿ, ಪಿಡಿಒ ಜಯಲಕ್ಷ್ಮಿ ದಶವಂತ,ಮುಖಂಡರಾದಮಲ್ಲಿಕಾರ್ಜುನ ಗುಣಕಿ, ಬಸವರಾಜ ಸವದಿ, ಆನಂದ ಹೊಸಮನಿ, ಶಾಲೆಯ ಮುಖ್ಯ ಶಿಕ್ಷಕ ಎನ್. ಎಸ್. ಜೊಲ್ಲಿ, ಎಸ್.ಡಿ.ಎಂ.ಸಿ ಅಧ್ಯಕ್ಷ ರಮೇಶಮಾಳೆದ,ಚಿಕ್ಕಮಕ್ಕಳತಜ್ಞರಾದಡಾ. ರಾಮಕೃಷ್ಣ, ಡಾ. ನವಾಜ?ಡಾ. ಸಿದ್ದಾರ್ಥ, ಡಾ. ಮಹೇಶ ಪಾಟೀಲ, ಜಾನಪದ ಕಲಾವಿದ ಸೋಮನಿಂಗ ಧನಗೊಂಡ, ಪ್ರಗತಿಪರ ರೈತರಾದ ಶಿವಾನಂದ ಮಸಳಿ, ಚನ್ನಪ್ಪ ಸಿದ್ದನಾಥ, ಶರಣಪ್ಪ ತಿಕೋಟಾ, ಶಿಕ್ಷಕ ಶಿವಪ್ಪ ಮಸಳಿ, ಶುಶ್ರೂಷಕ ಅಧಿಕಾರಿ, ರಮೇಶ ಮಗದಾರೆ ಮತ್ತು ಸಿಬ್ಬಂದಿಗಳಾದ ಶಿವನಗೌಡ ಬಾದರಬಂಡಿ, ಸುರೇಶ, ಶಿಲ್ಪಾ, ಪ್ರೇಮಕುಮಾರ ಹಾಗೂ ಇಸಿಜಿ ತಂತ್ರಜ್ಞರಾದಬಿಸ್ಮಾಸಾಜಿಪಾ,ಪಲ್ಲವಿ,ಮನಿ, ರಾಹುಲ್ ರಾಠೋಡ ಭುವನೇಶ್ವರಿಆಕಾಶ ಕಲಬುರ್ಗಿ,

ಪಿ.ಆರ್.ಎ ಶಶಿಕಾಂತ ಕೋಳಿ, ಹನಮಂತರಾವ ಕನಸೆಚಂದ್ರಕಾಂತ ತೋಳೆ ಆಯಿ ಕಮಲಾಬಾಯಿ ಹಾಗೂ ಗ್ರಾಮದ ಆಶಾ ಕಾರ್ಯಕರ್ತೆಯರು, ಗ್ರಾ. ಪಂ. ಸಿಬ್ಬಂದಿ ಅಪ್ಪು,ಆನಂದ,ಮಹೇಶ ಪಾಟೀಲ ಮುಂತಾದವರು ಉಪಸ್ಥಿತರಿದ್ದರು.

# ಸುಖ ಶಾಂತಿ ನೆಮ್ಮದಿಗೆ ದೇವರ ಆರಾಧನೆ ಮುಖ್ಯ: ಬಸವರಾಜ ಮತ್ತಿಮೂಡ

**ಕಲಬುರಗಿ :** ದೇವಸ್ಥಾನ ಮಠ ಮಂದಿರಗಳು ಮನುಷ್ಯನಿಗೆ ನೆಮ್ಮದಿ ನೀಡುವ ತಾಣಗಳಾಗಿವೆ, ಎಲ್ಲರೂ ಒಂದಾಗಿ ದೇವರ ಆರಾಧನೆಯನ್ನು ಶಾಂತಿಯಿಂದ ಆಚರಿಸಿದಾಗ ಸುಖ ಶಾಂತಿ ನೆಮ್ಮದಿ ದೊರೆಯುತ್ತದೆ ಎಂದು ಕಲಬುರಗಿ ಗ್ರಾಮೀಣ ಮತ ಕ್ಷೇತ್ರದ ಶಾಸಕ ಬಸವರಾಜ ಮತ್ತಿಮೂಡ ಹೇಳಿದರು.

ಕಲಬುರಗಿ ತಾಲೂಕಿನ ಅವರಾದ (ಬಿ) ಗ್ರಾಮದ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ಅಂಗ ವಾಗಿ ಹಮ್ಮಿಕೊಂಡಿರುವ

ಐದು ದಿನಗಳ ಜೀವನ ದರ್ಶನ ಪ್ರವ ಚನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದಿವ್ಯ ಸಾನಿಧ್ಯವಹಿಸಿದ್ದ ಗ್ರಾಮದ ಚರಂತಿ ಮಠದ ಒಡೆಯರಾದ ಮರುಳಸಿದ್ದ ಶಿವಾಚಾರ್ಯರು ಆಶೀರ್ವಚನ ನೀಡಿ-ದರು. ಸಂಸ್ಕಾರ ಎಲ್ಲಿಯೂ ಮಾರಾಟಕ್ಕೆ ಸಿಗುವುದಿಲ್ಲ, ಧರ್ಮ ಸಮಾರಂಭಗಳಲ್ಲಿ, ದೇವ ಸ್ಥಾನಗಳಲ್ಲಿ ಅದು ಲಭಿಸುತ್ತದೆ. ಆಧುನಿಕತೆಯ ಪರಿಣಾಮವಾಗಿ ಇಂದಿನ ದಿನಗಳಲ್ಲಿ ಹಿಂದಿನ ಕಾಲದ ಸಂಸ್ಕಾರ ಮರೆಯಾಗುತ್ತಿದೆ. ಆದ್ದರಿಂದ ತಾಯಂದಿರು ಬಾಲ್ಯದಲ್ಲಿಯೇ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ ಎಂದರು.

ಪ್ರವಚನಕಾರರಾದ ಸುಂಟನೂರ ಪೂಜ್ಯ ಶ್ರೀ ಬಂಡಯ್ಯ ಶಾಸ್ತ್ರೀಗಳು, ಮನುಷ್ಯ ಜನ್ಮ ತಾಳಿದ ಮೇಲೆ ತಂದೆ-ತಾಯಿ, ಭೂಮಿ, ಸಮಾಜ, ದೇಶ, ಗುರು, ದೇವರ ತಾಣ ಇರುತ್ತದೆ. ತಂದೆ-ತಾಯಿಗಳನ್ನು ಗೌರವದಿಂದ ಕಂಡಾಗ, ಸಮಾಜದ ಶ್ರೆಯಸ್ಸಿಗೆ ದುಡಿ-ದಾಗ, ದೇಶದ ಬಗ್ಗೆ ಅಭಿಮಾನ ಹೊಂದಿದಾಗ, ಗುರುಗಳನ್ನು ಪೂಜ್ಯ ಭಾವನೆಯಿಂದ ನೋಡಿ-ದಾಗ, ದೇವರಲ್ಲಿ ಭಕ್ತಿಯನ್ನು ಸಮರ್ಪಿಸಿದಾಗ ಈ ಎಲ್ಲ ಋಣಗಳನ್ನು ತೀರಿಸಲು ಸಾಧ್ಯವಾಗುತ್ತದೆ ಎಂದು ಪ್ರವಚನ ನೀಡಿದರು.

# ಮಕ್ಕಳಿಗೆ ಶಿಕ್ಷಣದ ಜೊತೆ ಸಂಸ್ಕಾರವನ್ನು ನೀಡಿ



**ಮಹಾಲಿಂಗಪುರ :** ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರದ ಅರಿವು ಮೂಡಿಸಬೇಕೆಂದು ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಕುಲಸಚಿವ ಸಂತೋಷ ಕಾಮಗೌಡ ಹೇಳಿದರು.

ಸಮೀಪದ ಸಮೀರವಾಡಿಯ ಸೋಮೈಯಾ ಶಿಶು ನಿಕೇತನ ಪ್ರಾಥಮಿಕ ಹಾಗೂ ವಿನಯ ಮಂದಿರ ಪ್ರೌಢ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ನೀಡುವುದು ಪ್ರತಿಯೊಬ್ಬ ಪಾಲಕರ ಕರ್ತವ್ಯ. ಯಾವ ಮಗು ಕೂಡಾ ಶಿಕ್ಷಣದಿಂದ ವಂಚಿತರಾಗಬಾರದು. ಶಿಕ್ಷಣದಿಂದ ಮಾತ್ರ ಸದೃಢ ಸಮಾಜ ನಿರ್ಮಾಣವಾಗಲು ಸಾಧ್ಯ. ಪಾಲಕರಾದವರು ತಮ್ಮ ಮಕ್ಕಳಿಗೆ ಶಿಕ್ಷಣದ ಜೊತೆ ಗುರು ಹಿರಿಯರನ್ನು ಗೌರವಿಸುವ ಸಂಸ್ಕಾರವನ್ನು ಕಲಿಸಬೇಕು.

ಶಿಕ್ಷಕ, ಪಾಲಕ, ಬಾಲಕ ಈ ಮೂವರ ಸಂಬಂಧ ಗಟ್ಟಿ ಇದ್ದರೆ ಮಾತ್ರ ಪರಿಪೂರ್ಣ ಜ್ಞಾನ ಹೊಂದಲು ಸಾಧ್ಯ. ಪಾಲಕರು ತಮ್ಮ ಮಕ್ಕಳಿಗೆ ಮೊಬೈಲ್ ಕೊಡದೆ ಅವರ ಓದಿನ ಕಡೆಗೆ ಗಮನ ಹರಿಸಬೇಕು.ವಿದ್ಯಾರ್ಥಿಗಳು ಕೂಡಾ ಅಷ್ಟೇ.

ಶಿಕ್ಷಕರು ಹೇಳಿದ ಅಭ್ಯಾಸವನ್ನು ಪ್ರತಿ ನಿತ್ಯ ಮಾಡಿದರೆ ಮಾತ್ರ ಪರೀಕ್ಷೆಯಲ್ಲಿ ಯಶಸ್ವಿಯಾಗಲು ಸಾಧ್ಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಜಿಬಿಎಲ್ ಸಿಟಿಓ ದಿನೇಶ ಶರ್ಮಾ ಮಾತನಾಡಿ ವಿದ್ಯಾರ್ಥಿಗಳು ಇಂತಹ ಸುಂದರ ಪರಿಸರದ ಮಧ್ಯೆ ಶಿಕ್ಷಣವನ್ನು ಕಲಿಯುತ್ತಿರುವುದು ನಿಜಕ್ಕೂ ಭಾಗ್ಯಶಾಲಿಗಳು.

ಪ್ರತಿಯೊಬ್ಬ ವಿದ್ಯಾರ್ಥಿಗಳು ಶ್ರದ್ಧೆಯಿಂದ ಅಭ್ಯಾಸ ಮಾಡಿ ಉತ್ತಮ ಜೀವನ ರೂಪಿಸಿಕೊಳ್ಳಬೇಕು ಎಂದರು.

ಸಂಸ್ಥೆಯ ಕಾರ್ಯದರ್ಶಿ ಡಾ. ವಿಜಯಕುಮಾರ ಕಣವಿ, ಪ್ರಾಥಮಿಕ ವಿಭಾಗದ ಮುಖ್ಯಗುರು ಬಿ. ಎಸ್. ಶಿಳಿನ, ಪ್ರೌಢಶಾಲೆ ಮುಖ್ಯಗುರು ವ್ಹಿ. ಎಸ್. ಭಜಂತ್ರಿ, ಸೋಮೈಯಾ ಸಿಬಿಎಸ್ಸಿ ಪ್ರೌಢಶಾಲೆ ಮುಖ್ಯಗುರು ಸಿ. ಅನೀಲಕುಮಾರ ಹಾಜರಿದ್ದರು.

ಸೋಮು ಕನಕರೆಡ್ಡಿ ಪರಿಚಯಿಸಿದರು. ಪ್ರಾಥಮಿಕ ವಿಭಾಗದ ವಾರ್ಷಿಕ ವರದಿಯನ್ನು ಸಹಶಿಕ್ಷಕ ಎಂ. ಎಸ್. ಕಂಪು ಹಾಗೂ ಪ್ರೌಢ ವಿಭಾಗದ ವಾರ್ಷಿಕ ವರದಿಯನ್ನು ವ್ಹಿ. ಎಸ್. ಭಜಂತ್ರಿ ಮಂಡಿಸಿದರು. ಸಹನಾ ಸನಸಿದ್ದ ಸೊಗಸಾಗಿ ನಿರೂಪಿಸಿದರು. ದೀಪಾ ಅಂಗಡಿ ವಂದಿಸಿದರು.

# ಸ್ವಾಮಿ ವಿವೇಕಾನಂದ ಜಯಂತಿ ಮತ್ತು ಸಂಕ್ರಾಂತಿ ವೈಭವ



**ಮಹಾಲಿಂಗಪುರ :** ಸಮೀಪದ ರನ್ನ ಬೆಳಗಲಿ ಪಟ್ಟಣದ ಸರ್ಕಾರಿ ಹೆಣ್ಣು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೋಮವಾರ ಸ್ವಾಮಿ ವಿವೇಕಾನಂದರ ಜಯಂತಿ ಹಾಗೂ ಮಕರ ಸಂಕ್ರಾಂತಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು.


ಯೋಗ ಶಿಕ್ಷಕ ರಾಘವೇಂದ್ರ ನೀಲಣ್ಣವರ ಮಾತನಾಡಿ, ಹನ್ನೆರಡು ವರ್ಷಕ್ಕೊಮ್ಮೆ ಜರುಗುವ ಮಹಾ ಕುಂಭಮೇಳದ ಪುಣ್ಯ ಘಳಿಗೆಯ ಸಂದಭ9ವಾದ ಈ ದಿನ, ಸಂಕ್ರಾಂತಿ ಹಬ್ಬದ ಜೊತೆಗೆ ವಿಶ್ವಕ್ಕೆ ಭಾರತೀಯ ಜ್ಞಾನದ ಮಹತ್ವವನ್ನು ಪರಿಚಯಿಸಿದ ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರ ಜಯಂತಿ ಆಚರಣೆ ಮಹತ್ವ ಪೂಣ9ವಾಗಿದೆ. ಸುಗ್ಗಿಯ ಸಂಭ್ರಮದಲ್ಲಿ ರೈತ ತನಗೆ ಆಶ್ರಯವಾದ ಎಲ್ಲಾ ಕಸುಬುದಾರರಿಗೆ ಫಸಲನ್ನು ಹಂಚಿ ಸಂತಸ ಪಡುವ ದಿನವೇ ಸಂಕ್ರಾಂತಿ. ದಕ್ಷಿಣಾಯನ ಮುಗಿದು ಉತ್ತರಾಯಣ ಪ್ರಾರಂಭಗೊಳ್ಳುವ ಪುಣ್ಯಗಳಿಗೆ ಸಂಕ್ರಾಂತಿ ಎನ್ನುವರು.

ವಿವೇಕಾನಂದರ ನುಡಿ ಮುತ್ತುಗಳೇ ಯುವಕರಿಗೆ ಸಾಧನೆಯ ಮೆಟ್ಟಿಲುಗಳಾಗಿವೆ. ವಿದ್ಯಾರ್ಥಿಗಳು ವಿವೇಕಾನಂದರಂತೆ ಧ್ಯಾನಿಸಬೇಕು ಮತ್ತು ಇಂದ್ರಿಯಗಳ ನಿಗ್ರಹ ಮಾಡಿ ಸಾಧಕರಾಗಬೇಕು ಎಂದರು.

ಶ್ರೀಮತಿ ಎಸ್. ಪಿ. ಜೋಶಿ ಕಾರ್ಯಕ್ರಮ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಶ್ರೀಮತಿ ಎಸ್. ಎಲ್. ಕಠಾರೆ ವಹಿಸಿದ್ದರು. ಶ್ರೀಮತಿ ಆರ್. ಡಿ. ಬಂಡಿ, ಶ್ರೀಮತಿ ಹೆಚ್. ಬಿ. ಜಮಾದಾರ, ಕುಮಾರಿ ರೂಪಾ ದಂಡಿನ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

ಹಿರಿಯರಾದ ಬೌರವ್ವ ಮೈಗೂರ, ಗುರವ್ವ ಚಿಮ್ಮಡ, ಹಣಮವ್ವ ಮುಧೋಳ, ಯಲ್ಲವ್ವಾ ಶಿರೋಳ, ಶೀಘಾ ಇನಾಮದಾರ, ಕಾಳಮ್ಮ ಬಡಿಗೇರ, ಶೋಭಾ ವೀರಘಂಟಿ, ಭಾರತಿ ಮೆಳ್ಳಿಗೇರಿ ಸೇರಿದಂತೆ ಇನ್ನೂ ಅನೇಕರು ಭಾರತೀಯ ಸಾಂಪ್ರದಾಯಿಕ ಉಡುಗೆ ತೊಟ್ಟು ಸಂಕ್ರಾಂತಿ ಹಬ್ಬ ಆಚರಿಸಿದರು.

# ಭೂ ದಾಖಲೆಗಳ ಡಿಜಿಟಲೀಕರಣಕ್ಕೆ ಎಸಿ ಅಬೀದ್ ಚಾಲನೆ



**ಇಂಡಿ :** ನಗರದ ತಾಲೂಕು ಕಚೇರಿಯಲ್ಲಿ ಅಭಿಲೇಖಾಲಯ ದಲ್ಲಿನ ದಾಖಲೆಗಳು ಮತ್ತು ಸರ್ವೆ ದಾಖಲೆಗಳ ಡಿಜಿಟಲೀ ಕರಣದ ಭೂ ಸುರಕ್ಷಾ ಯೋಜನೆಗೆ ಚಾಲನೆ ದೊರೆತಿದೆ.

ಕಂದಾಯ ಉಪವಿಭಾಗಾಧಿಕಾರಿ ಗಳು ಅಬೀದ್ ಗದ್ಯಾಳ ಯೋಜನೆಗೆ ಚಾಲನೆ ನೀಡಿ ಮಾತನಾಡಿ ರೈತರು ತಮ್ಮ ಭೂ ದಾಖಲೆಗಳನ್ನು ಕಳೆದುಕೊಂಡು ಮತ್ತೆ ಪಡೆಯಲು ತಹಸೀಲ್ದಾರ ಕಚೇರಿಗೆ ಅಲೆದಾಡಿದರೂ ದಾಖಲೆಗಳು ದೊರೆಯುತ್ತಿರಲಿಲ್ಲ. 40-50 ವರ್ಷದ ಹಳೆಯ ಭೂ ದಾಖಲೆಗಳ ಪತ್ರದ ಕಾಗದ ಹಳೆಯದಾಗಿ ಹರಿದು ಹೋಗಿ ತನ್ನ ಅಸ್ತಿತ್ವ ಕಳೆದುಕೊಳ್ಳುತ್ತಿತ್ತು. ಇದನ್ನು ಚಿಂತಿಸಿ ಸರಕಾರ ಮುಂದಾಗಿದೆ ಎಂದು ತಿಳಿಸಿದರು.

ಭೂ ಸುರಕ್ಷಾ ಎಂಬ ಅಪ್ಲಿಕೇಶನ್ ನಲ್ಲಿ ನಿಮ್ಮ ಭೂ ದಾಖಲೆಯ ಸಂಖ್ಯೆಯನ್ನು ನೀಡಿದರೆ ಸಾಕು ಒಂದು ನಿಮಿಷದಲ್ಲಿ ನಿಮ್ಮ ಭೂ ದಾಖಲೆ ಪತ್ರಗಳನ್ನು ನೀಡುವ ಕ್ರಾಂತಿಕಾರಿ ಯೋಜನೆಯನ್ನು ಸರಕಾರ ಮಾಡಿದೆ. ಇಂದು ಡಿಜಟಲೀಕರಣ ಯೋಜನೆಗೆ ಅಧಿಕೃತವಾಗಿ ಚಾಲನೆ ನೀಡಿರುವದು ಸಂತಸದ ವಿಷಯ. ಈ ಯೋಜನೆಯಿಂದ ರೈತರು ಹಾಗೂ ಸಾರ್ವಜನಿಕರಿಗೆ ಅವರಿಗೆ ಬೇಕಾದ ಸಮಯದಲ್ಲಿ ದಾಖಲೆಗಳ ಪ್ರಿಂಟ್ ಗಳನ್ನು ಕೊಡಬಹುದು ಎಂದರು. ರೈತರಿಗೆ ಸಮಸ್ಯೆಗಳನ್ನು ಪರಿಹರಿಸಲು ಕಂದಾಯ ಇಲಾಖೆಯಲ್ಲಿ ಡಿಜಿಟಲೀಕರಣ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಇಲ್ಲಿಯ ತನಕ ಕಂದಾಯ ಇಲಾಖೆಯಲ್ಲಿ ನೊಂದಣಿಯಾಗಿರುವಎಲ್ಲ ಭೂಮಿ ದಾಖಲಾತಿಗಳನ್ನು ಸ್ಕಾ??ನ್ ಮಾಡಿ ಕ್ಲೌಡ್ ನಲ್ಲಿ ಸಂಸ್ಕರಿಸಲಾಗುವ ಯೋಜನೆ ಇದಾಗಿದೆ ಎಂದರು. ತಹಸೀಲ್ದಾರ ಬಿ.ಎಸ್.ಕಡಕಭಾವಿ, ಗ್ರೇಡ್ 2 ತಹಸೀಲ್ದಾರ ಧನಪಾಲಶೆಟ್ಟಿ ದೇವೂರ, ಶಿರಸ್ತೆದಾರ ಎಸ್.ಆರ್.ಮುಜಗೊಂಡ, ರಾಜು ಮೂಗಿ, ಸಂಕೇತ ಪಾಟೀಲ,ಎಸ್.ಎಚ್.ಗುನ್ನಾಪುರ ಹಾಗೂ ಮತ್ತಿತರಿದ್ದರು.

# ಕಾಲುವೆಗೆ ನಾಲ್ಕು ಮಕ್ಕಳನ್ನು ಎಸೆದು ತಾಯಿ ಆತ್ಮಹತ್ಯೆ ಯತ್ನ: ನಾಲ್ವರು ಮಕ್ಕಳ ಶವ ಪತ್ತೆ

**ವಿಜಯಪುರ :** ಆಸ್ತಿ ಹಾಗೂ ಕೌಟುಂಬಿಕ ಕಲಹ ಹಿನ್ನೆಲೆ ನಾಲ್ವರು ಮಕ್ಕಳೊಂದಿಗೆ ಕಾಲುವೆಯಲ್ಲಿ ಬಿದ್ದು ತಾಯಿ ಆತ್ಮಹತ್ಯೆ ಯತ್ನ ಪ್ರಕರಣಕ್ಕೆ ಸಂಬಂಧಿಸಿದಂತೆ ಬುಧವಾರ ಮತ್ತೋರ್ವ ಬಾಲಕನ ಶವ ಪತ್ತೆಯಾಗಿದ್ದು, ಇದೀಗ ಒಟ್ಟು ನಾಲ್ವರು ಮಕ್ಕಳ ಶವ ಪತ್ತೆಯಾಗಿವೆ.

ಅಗ್ನಿಶಾಮಕ ದಳದ ಭೀಮಾಶಂಕರ ಹಾಗೂ ಪಿ ಟಿ ಜಾಲಗೇರಿ ನೇತೃತ್ವದಲ್ಲಿ ನಡೆದ ಶೋಧ ಕಾರ್ಯಾಚರಣೆಯಲ್ಲಿ ಇಂದು ಮತ್ತೋರ್ವ ಬಾಲಕ ಪತ್ತೆಯಾಗಿದ್ದಾನೆ. ಇದರಿಂದ ದುರಂತದಲ್ಲಿ ಸಾವಿಗೀಡಾದ ಒಟ್ಟು ನಾಲ್ವರು ಮಕ್ಕಳ ಶವಗಳು ಪತ್ತೆಯಾದಂತಾಗಿದೆ.

ವಿಜಯಪುರ ಜಿಲ್ಲೆ ನಿಡಗುಂದಿ ತಾಲೂಕಿನ ಬೇನಾಳ ಬಳಿಯ ಆಲಮಟ್ಟಿ ಎಡದಂಡೆ ಕಾಲುವೆಯಲ್ಲಿ ಜನವರಿ 13 ರಂದು ಈ ಘಟನೆ ನಡೆದಿತ್ತು.ಅಂದು ಮಕ್ಕಳ ತಾಯಿ ಭಾಗ್ಯಶ್ರೀ ನಿಂಗರಾಜ ಭಜಂತ್ರಿ ಅವರನ್ನು ಮೀನುಗಾರರು ರಕ್ಷಣೆ ಮಾಡಿದ್ದರು. ಘಟನೆ ನಡೆದ ದಿನವೇ ಭಾಗ್ಯಶ್ರೀಯ ಇಬ್ಬರು ಹೆಣ್ಣು ಮಕ್ಕಳಾದ ತನು(5) ರಕ್ಷಾ (3) ಶವಗಳನ್ನು ಮೀನುಗಾರರು ಹೊರ ತೆಗೆದಿದ್ದರು.

ಅವಳಿ ಮಕ್ಕಳಾದ ಹಸೇನ್ ಹಾಗೂ ಹುಸೇನ್ ಶವಕ್ಕಾಗಿ ಅಗ್ನಿಶಾಮಕ ದಳದ ಸಿಬ್ಬಂದಿ ಶೋಧನೆ ಕಾರ್ಯ ಮುಂದುವರೆಸಿತ್ತು.

ಅವಳಿ ಬಾಲಕರಲ್ಲಿ ನಿನ್ನೆ ಓರ್ವ ಬಾಲಕನ ಶವ ಪತ್ತೆಯಾಗಿತ್ತು.

ಮತ್ತೋರ್ವ ಬಾಲಕನ ಶವಕ್ಕಾಗಿ ಶೋಧನೆ ಇನ್ನೂ ಮುಂದುವರೆದಿತ್ತು. ಇಂದು ಬೇನಾಳ ರಸ್ತೆಯ ಬಳಿಯ ಕಾಲುವೆಯಿಂದ ಎರಡು ಕಿಲೋ ಮೀಟರ್ ದೂರದಲ್ಲಿ ಮತ್ತೋರ್ವ ಬಾಲಕನ ಶವ ಪತ್ತೆಯಾಗಿದೆ.

ನಿಡಗುಂದಿಯ ಸರ್ಕಾರಿ ಆಸ್ಪತ್ತೆಗೆ ಪೊಲೀಸರು ಬಾಲಕನ ಶವ ರವಾನೆ ಮಾಡಿದ್ದಾರೆ.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State